ಸಂಪುಟ: 01 ಸಂಚಿಕೆ: 21 ಪುಟ: 04 ಬೆಲೆ: 02 ಗುರುವಾರ ಜೂನ್ 25 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ




Volume:01 Issue:21 Pages:04 Price:02 THURSDAY JUNE 25 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಯಾರದೊ ಹೆಸರು,ಯಾರದೊ ಬಸಿರು,ಹೆರಿಗೆಯ ವೇದನೆ ಅನುಭವಿಸುವವರು ಮಾತ್ರ ಬೇರೆಯವರು. ಬೇರೆಯವರ ವೇದನೆಯ ನೋವಿನಲ್ಲೂ ತಮ್ಮ ಸ್ವ ಪ್ರತಿಷ್ಠೆಯನ್ನು ಉಳಿಸಿಕೊಂಡು ಸಮಾಜದೆದುರು ನಾನಾ ವೇಷಗಳನ್ನು ಹಾಕಿಕೊಂಡು ಕುಣಿಯುವುದು ಲೋಭಿಗಳ ಕೆಲಸ.



ವಾಣಿ ಭಂಡಾರಿ.

# ಸಚಿವರಿಲ್ಲದೆ ಸೊರಗುತ್ತಿದೆ ಶಿಕ್ಷಣ ಇಲಾಖೆ

**ಬೆಂಗಳೂರು: ಶೈಕ್ಷಣಿಕ ವರ್ಷ ಆರಂಭಗೊಂಡರೂ ರಾಜ್ಯದಲ್ಲಿ ಶಿಕ್ಷಣ ಸಚಿವರುಗಳಿಲ್ಲದೇ ವ್ಯಾಸಂಗ ಸೊರಗುವಂತಾಗಿದೆ. ರಾಜಕೀಯ ಕಾರಣಗಳಿಗಾಗಿ ಸಚಿವ ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ. ಅದರಲ್ಲೂ ಪ್ರಮುಖವಾಗಿ ಕೃಷಿ ಮತ್ತು ಶಿಕ್ಷಣ ಇಲಾಖೆಗೆ ಪ್ರತ್ಯೇಕ ಸಚಿವರಿಲ್ಲದೇ, ಈ ಪ್ರಮುಖ ಖಾತೆಗಳು ಮುಖ್ಯಮಂತ್ರಿಯವರ ಬಳಿಯೇ ಉಳಿದಿವೆ.**

ನೈರುತ್ಯ ಮುಂಗಾರು ಆರಂಭವಾಗಿ ಕೃಷಿ ವರ್ಷ ಶುರುವಾಗಿದೆ. ಜೂನ್‌ನಿಂದ ಶೈಕ್ಷಣಿಕ ವರ್ಷ ಕೂಡ ಆರಂಭಗೊಂಡಿದೆ. ಶಾಲಾ, ಕಾಲೇಜುಗಳಲ್ಲಿ ಪ್ರವೇಶ ಹಾಗೂ ಇತರೆ ಚಟುವಟಿಕೆಗಳು ಬಿರುಸಿನಿಂದ ನಡೆಯುತ್ತಿವೆ. ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಕಾಲೇಜು ಶಿಕ್ಷಣಕ್ಕೆ ಪ್ರತ್ಯೇಕವಾದ ಸಚಿವರ ಅಗತ್ಯತೆ ಇತ್ತು. ಶಿಕ್ಷಣದಲ್ಲಿ ಮಹತ್ವದ ಸುಧಾರಣೆ ಮಾಡಲು ಹಿಂದಿನ ಸಿದ್ದರಾಮಯ್ಯ ಸರ್ಕಾರ, ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ.




ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪದೇ, ಕರ್ನಾಟಕ ತನ್ನದೇ ಆದ ಶಿಕ್ಷಣ ನೀತಿ ರೂಪಿಸಲು ಮುಂದಾಗಿದೆ. ಅದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಿ ವರದಿ ಪಡೆಯುವ ಪ್ರಯತ್ನಗಳಾಗಿದ್ದವು.

ಜೊತೆಗೆ ರಾಜ್ಯಾದ್ಯಂತ ಸುಮಾರು 800ಕ್ಕೂ ಹೆಚ್ಚು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಕ್ರಿಯಾ ಯೋಜನೆ ಸಿದ್ಧವಾಗಿದೆ. ಈ ಹಂತದಲ್ಲಿ ಇಲಾಖೆಗೆ ಪ್ರತ್ಯೇಕವಾದ ಸಚಿವರ ಅಗತ್ಯ ಹೆಚ್ಚಿತ್ತು. ಶಾಲಾ, ಕಾಲೇಜುಗಳ ಪ್ರವೇಶದಲ್ಲಿ ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಕೊರತೆಯಾದರೆ, ಖಾಸಗಿ ಶಾಲೆಗಳಲ್ಲಿ ಅಧಿಕವಾದ ಶುಲ್ಕ, ಅನಧಿಕೃತವಾದ ಡೊನೇಷನ್ ಹಾವಳಿಯಿಂದ ಪೋಷಕರು ಹೈರಾಣಾಗುತ್ತಿದ್ದಾರೆ. ಸಚಿವರಿಲ್ಲದ ಕಾರಣ ಅಧಿಕಾರಿಗಳು ತಮ ವ್ಯಾಪ್ತಿಯಲ್ಲಷ್ಟೇ ಕೆಲಸ ಮಾಡಲು ಸಾಧ್ಯವಾಗುತ್ತಿದೆ. ಕೆಲವು ವಿಚಾರಗಳಲ್ಲಿ ಜನ ಪ್ರಾತಿನಿಧ್ಯದ ಅಗತ್ಯ ತೀವ್ರವಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಈ ಕೊರತೆ ಎದ್ದು ಕಾಣುತ್ತಿದೆ. ಶಾಲಾ ಶಿಕ್ಷಣ ವ್ಯಾಪ್ತಿಯಲ್ಲಿ 41 ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳು ಮತ್ತು ಸಾವಿರಾರು ಪ್ರೌಢ ಶಾಲೆಗಳಿವೆ.

1,78,935 ಶಿಕ್ಷಕರ ಹುದ್ದೆಗಳು ಮಂಜೂರಾಗಿವೆ. ರಾಜ್ಯದಲ್ಲಿ 1.33 ಲಕ್ಷ ಶಿಕ್ಷಕರು ಕೆಲಸ ಮಾಡುತ್ತಿದ್ದು, 45,590 ಹುದ್ದೆಗಳು ಖಾಲಿ ಇವೆ. 51 ಸಾವಿರ ಅತಿಥಿ ಶಿಕ್ಷಕರನ್ನು 2026–27ನೇ ಸಾಲಿಗೆ ನೇಮಿಸಿಕೊಳ್ಳಲು ರಾಜ್ಯ ಸರ್ಕಾರ ಅನುಮತಿಸಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗಳಲ್ಲಿ 79 ಸಾವಿರಕ್ಕೂ ಹೆಚ್ಚು ಉನ್ನತ

4ನೇ ಪುಟಕ್ಕೆ

## ಹಾಲಿನ ಟ್ಯಾಂಕರ್ ಪಲ್ಟಿಯಾಗಿ ಮಣ್ಣುಪಾಲಾದ ಸಾವಿರಾರು ಲೀಟರ್ ಹಾಲು

ಅ.ಶ. ಸುದ್ದಿ ಕೊರಟಗೆರೆ

**ಕೊರಟಗೆರೆ: ಚಾಲಕನ ನಿಯಂತ್ರಣ ತಪ್ಪಿದ ಹಾಲಿನ ಕೆಎಂಎಫ್ ಟ್ಯಾಂಕರ್ ಆಯತಪ್ಪಿ ಉರುಳಿಬಿದ್ದ ಪರಿಣಾಮ ಸಾವಿರಾರು ಲೀಟರ್ ಹಾಲು ಮಣ್ಣುಪಾಲಾದ ಘಟನೆ ತಾಲ್ಲೂಕಿನ ಸಿದ್ದರಬೆಟ್ಟ ಸಮೀಪದ ನರ್ಸರಿ ತಿರುವಿನ ಬಳಿ ನಡೆದಿದೆ.**



ತುಂಬಾಡಿಯಿಂದ ಸಿದ್ದರಬೆಟ್ಟ ಮಾರ್ಗವಾಗಿ ತೆರಳುತ್ತಿದ್ದ ಕೆಎಂಎಫ್ ಹಾಲಿನ ಟ್ಯಾಂಕರ್ ಸಿದ್ದರಬೆಟ್ಟ ಸಮೀಪ ಅರಣ್ಯ ಇಲಾಖೆಯ ನರ್ಸರಿ ತಿರುವಿನ ಬಳಿ ಪಲ್ಟಿಯಾಗಿದ್ದು, ಸಾವಿರಾರು ಲೀಟರ್ ಹಾಲು ರಸ್ತೆ ಬದಿಗೆ ಚೆಲ್ಲಿಹೋಗಿ ವ್ಯರ್ಥವಾಗಿದೆ. ಅದೃಷ್ಟವಶಾತ್ ಟ್ಯಾಂಕರ್ ಚಾಲಕ ಗಾಯಗೊಂಡು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಚಾಲಕನನ್ನು ತಕ್ಷಣ ಕೊರಟಗೆರೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಸ್ಥಳೀಯರು ಹಾಗೂ ಸಂಬಂಧಿತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪಘಾತದಿಂದ ಕೆಲಕಾಲ ಸಂಚಾರದಲ್ಲಿ ಅಡಚಣೆ ಉಂಟಾಗಿದ್ದು, ಬಳಿಕ ವಾಹನ ಸಂಚಾರವನ್ನು ಸುಗಮಗೊಳಿಸಲಾಯಿತು.

# ಕೊಪ್ಪಳದಲ್ಲಿ 'ಸ್ಮೃತಿ ಸಂಗಮ' ವಾರ್ಷಿಕೋತ್ಸವ ಹಾಗೂ ಬೀಳ್ಕೊಡುಗೆ ಸಮಾರಂಭ ಯಶಸ್ವಿ




ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಭಾರತರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯ, ಕೊಪ್ಪಳದಲ್ಲಿ ವಾರ್ಷಿಕೋತ್ಸವ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ "ಸ್ಮೃತಿ ಸಂಗಮ The Next Chapter" ಕಾರ್ಯಕ್ರಮವು ಬುಧವಾರ ವಿಜೃಂಭಣೆಯಿಂದ ನಡೆಯಿತು.**

ಕಾರ್ಯಕ್ರಮವನ್ನು ಸಾನ್ನಿಧ್ಯ ವಹಿಸಿ ಉದ್ಘಾಟಿಸಿದ ಮನಿ.ಪ್ರ.ಸ್ವಾ. ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳು ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿ, ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸಿಕೊಳ್ಳುವಂತೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ ಕರ್ನಾಟಕದ ಕಾರ್ಯಾಧ್ಯಕ್ಷರು ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಮಾಜಿ ಮಹಾಪೌರರಾದ ಶ್ರೀ ಈರೇಶ ಬಿ. ಅಂಚಟಗೇರಿ ವಹಿಸಿದ್ದರು. ಅವರು ಮಾತನಾಡಿ, ಕಾನೂನು ಶಿಕ್ಷಣವು ನ್ಯಾಯ, ನೈತಿಕತೆ ಮತ್ತು ಸಾಮಾಜಿಕ ಬದ್ಧತೆಯ ಸಂಕೇತವಾಗಿದ್ದು, ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಸಮಾಜದ ಒಳಿತಿಗಾಗಿ ಬಳಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ನಿರಂತರ ಕಲಿಕೆ, ಶಿಸ್ತು ಮತ್ತು ಆತ್ಮವಿಶ್ವಾಸದ ಮೂಲಕ ಉನ್ನತ ಸಾಧನೆಗಳನ್ನು ಮಾಡಬೇಕೆಂದು ಕರೆ ನೀಡಿದರು. ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುಶೀಲ ನಮೋಶಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕಾನೂನು ವಿದ್ಯಾರ್ಥಿಗಳು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿದು ಸಮಾಜದಲ್ಲಿ ನ್ಯಾಯ ಮತ್ತು ಸಮಾನತೆಯ ಪರವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಯುವಕರು ಶಿಕ್ಷಣದ ಜೊತೆಗೆ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಪಾತ್ರವನ್ನು ವಹಿಸಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಮಾಜಸೇವಕ ಹಾಗೂ ಕೆ.ಎಸ್. ಆಸ್ಪತ್ರೆಯ ಅಧ್ಯಕ್ಷರಾದ ಡಾ. ಬಸವರಾಜ ಕ್ಯಾವಟರ್ ಅವರು ವಿದ್ಯಾರ್ಥಿಗಳ ಭವಿಷ್ಯಕ್ಕೆ ಶುಭ ಹಾರೈಸಿದರು. ಸಭೆಯ ಕಾರ್ಯದರ್ಶಿ ಶ್ರೀ ಎಸ್. ರಾಧಾಕೃಷ್ಣನ್ ಅವರು ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಪ್ರಾಂಶುಪಾಲರಾದ ಶ್ರೀಮತಿ ಉಷಾದೇವಿ ಎಸ್. ಹಿರೇಮಠ ಅವರು ಸ್ವಾಗತಿಸಿ, ವಾರ್ಷಿಕ ವರದಿ ಮಂಡಿಸಿದರು. ಉಪಪ್ರಾಂಶುಪಾಲರಾದ ಶ್ರೀ ಬಸವರಾಜ ಎಸ್.ಎಂ. ಅವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು, ಪ್ರಾಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದ್ದು, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಭಾವಪೂರ್ಣ ಬೀಳ್ಕೊಡುಗೆ ನೀಡಲಾಯಿತು.



# ವಿಶ್ವ ರಕ್ತದಾನಿಗಳ ದಿನಾಚರಣೆ

**ಅ.ಶ. ಸುದ್ದಿ ಕೊಪ್ಪಳ**




**ಕೊಪ್ಪಳ: ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ ಹಾಗೂ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕದ ಸಹಯೋಗದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ?2026 ಕಾರ್ಯಕ್ರಮವನ್ನು ಬೆಂಗಳೂರು ನಗರದ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜ್ಞಾನ ಜ್ಯೋತಿ ಸೆಮಿನಾರ್ ಹಾಲ್‌ನಲ್ಲಿ ಜೂನ್ 23 ರಂದು ಜರುಗಿತು.**

"ಒಂದು ಹನಿ ಮಾನವೀಯತೆ ? ರಕ್ತದಾನ ಮಾಡಿ, ಜೀವ ಉಳಿಸಿ" ಎಂಬ ಘೋಷವಾಕ್ಯದಡಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ನಿರ್ದೇಶಕರಾದ ರಜನೀಶ್ ಶರ್ಮಾ ಉದ್ಘಾಟಿಸಿ ಮಾತನಾಡಿ, ರಕ್ತದಾನವು ಅತ್ಯುನ್ನತ ಮಾನವೀಯ ಸೇವೆಯಾಗಿದ್ದು, ಸ್ವಯಂಪ್ರೇರಿತ ರಕ್ತದಾನಿಗಳ ಸೇವೆ ಸಮಾಜಕ್ಕೆ ಅಪಾರ ಕೊಡುಗೆಯಾಗಿದೆ ಎಂದು ತಿಳಿಸಿದರು. ನಿಯಮಿತವಾಗಿ ರಕ್ತದಾನ ಮಾಡುವ ಮೂಲಕ ಅನೇಕ ಜೀವಗಳನ್ನು ಉಳಿಸುತ್ತಿರುವ ದಾನಿಗಳನ್ನು ಅಭಿನಂದಿಸಿ, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಚಳುವಳಿಗೆ ಸೇರ್ಪಡೆಯಾಗಬೇಕೆಂದು ಕರೆ ನೀಡಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ರಮೇಶ್ ಬಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ರಕ್ತದಾನದ ಮಹತ್ವವನ್ನು ಯುವಜನರಲ್ಲಿ ಅರಿವು ಮೂಡಿಸಿ, ಪ್ರತಿಯೊಬ್ಬರೂ ಸ್ವಯಂಪ್ರೇರಿತ ರಕ್ತದಾನಿಗಳಾಗುವಂತೆ ಪ್ರೇರೇಪಿಸಬೇಕೆಂದು ಹೇಳಿದರು. ಕರ್ನಾಟಕ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಮಾತನಾಡಿ, ರಕ್ತದಾನಿಗಳು ಸಮಾಜದಲ್ಲಿ ನಿಜವಾದ ನಾಯಕರಾಗಿದ್ದು, ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ಜೀವ ರಕ್ಷಣೆಗಾಗಿ ನೀಡುತ್ತಿರುವ ಸೇವೆ ಶ್ಲಾಘನೀಯವಾಗಿದೆ ಎಂದು ಹೇಳಿದರು.

ಆರೋಗ್ಯ ಕ್ಷೇತ್ರಕ್ಕೆ ರಕ್ತದಾನಿಗಳ ಕೊಡುಗೆ ಅಮೂಲ್ಯವಾಗಿದ್ದು, ಸಮಾಜ-ಕ್ಕೆ ಮಾದರಿಯಾಗಿದ್ದಾರೆ ಎಂದು ಪ್ರಶಂಸಿಸಿದರು. ಎಂಇಜಿ ಕೇಂದ್ರದ ಕರ್ನಲ್ ಪ್ರೊಸೆಂಜಿತ್ ದೇಬ್ ಮಾತನಾಡಿ, ತುರ್ತು ಚಿಕಿತ್ಸೆಗಳು, ಶಸ್ತ್ರಚಿಕಿತ್ಸೆಗಳು ಹಾಗೂ ಅಪಘಾತ ಸಂದರ್ಭಗಳಲ್ಲಿ ರಕ್ತದ ಅಗತ್ಯತೆ ಹೆಚ್ಚಾಗಿರುವುದರಿಂದ ಪ್ರತಿಯೊಬ್ಬ ಆರೋಗ್ಯವಂತ ನಾಗರಿಕರೂ ನಿಯಮಿತವಾಗಿ ರಕ್ತದಾನ ಮಾಡಬೇಕು ಎಂದು ಕರೆ ನೀಡಿದರು. ಸುರಕ್ಷಿತ ಹಾಗೂ ಸಮರ್ಪಕ ರಕ್ತ ಸಂಗ್ರಹವು ಆರೋಗ್ಯ ವ್ಯವಸ್ಥೆಯ ಬಲವರ್ಧನೆಗೆ ಅಗತ್ಯವೆಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕರ್ನಾಟಕ ರಾಜ್ಯ ಶಾಖೆಯ ಸಭಾಪತಿ ಬಸ್ರೂರು ರಾಜೀವ್ ಶೆಟ್ಟಿ ಹಾಗೂ ಉಪಸಭಾಪತಿಗಳಾದ ಡಾ. ಶ್ರೀನಿವಾಸ್ ಎಸ್. ಹ್ಯಾಟಿ ಅವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು.

ರಕ್ತದಾನಿಗಳಿಗೆ ಸನ್ಮಾನ: ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ 25 ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿದ 12 ಜನ ಸ್ವಯಂಪ್ರೇರಿತ ರಕ್ತದಾನಿಗಳನ್ನು ಸನ್ಮಾನಿಸಲಾಯಿತು. ಎ.ಎಂ. ಸುರೇಶ್ (86 ಬಾರಿ), ರಾಘವೇಂದ್ರ ಜಿ.ಎನ್. (78 ಬಾರಿ), ಎಂ. ಕಾರ್ತಿಕ್ (70ಕ್ಕೂ ಹೆಚ್ಚು ಬಾರಿ), ಡಾ. ಮಹೇಶ್ ಯಾಲೆಲಿಂಗಪ್ಪ (42 ಬಾರಿ), ನಾಗೇಶ್ ಬಾಳ್ನಾಡ್ (39 ಬಾರಿ), ಟಿ.ಆರ್. ನಾಗೇಶ್ (36 ಬಾರಿ), ರಾಮ್ ಕಿರಣ್ ಕೆ. (30 ಬಾರಿ), ನಾಗರಾಜನಾಯಕ ಡೊಳ್ಳಿನ್ (29 ಬಾರಿ), ರಾಘವೇಂದ್ರ ಶೆಟ್ಟಿ (27 ಬಾರಿ), ಅನಿಲ್ ರಾಜ್ ಎಚ್.ಸಿ. (27 ಬಾರಿ), ಮಹಾಂತೇಶ್ ಹೊಳೆಮ್ಮನವರ (26 ಬಾರಿ) ಹಾಗೂ ಹೇಮಂತ್ ಕಿಶೋರ್ ಮೋದಿ (26 ಬಾರಿ) ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಸನ್ಮಾನಿತ ರಕ್ತದಾನಿಗಳ ಪರವಾಗಿ ಕೊಪ್ಪಳದ ನಾಗರಾಜನಾಯಕ ಡಿ.ಡೊಳ್ಳಿನ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ಸ್ವಯಂಸೇವಕರು ಹಾಗೂ ಸಾರ್ವಜನಿಕರು ರಕ್ತದಾನದ ಮಹತ್ವದ ಬಗ್ಗೆ ಅರಿವು ಪಡೆದು, ಭವಿಷ್ಯದಲ್ಲಿ ನಿಯಮಿತವಾಗಿ ರಕ್ತದಾನ ಮಾಡುವ ಸಂಕಲ್ಪ ಕೈಗೊಂಡರು. ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆಯ ಉಪಸಭಾಪತಿಗಳಾದ ಡಾ. ಶ್ರೀನಿವಾಸ್ ಎಸ್. ಹ್ಯಾಟಿ ಅವರು ವಂದಿಸಿದರು.

## ಹ್ಯಾಟ್ರಿಕ್ ಗೆಲವು ಸಾದಿಸಿದ ತಿಪ್ಪಣ್ಣಪ್ಪ ಕಮಕನೂರ,ರಾಜ್ಯಧ್ಯಕ್ಷ ಸಿದ್ದು ಜಮಾದಾರ ಸನ್ಮಾನ

**ಅ.ಶ. ಸುದ್ದಿ ಕಲಬುರಗಿ**

**ಕಲಬುರಗಿ. ಕರ್ನಾಟಕ ರಾಜ್ಯದ.ವಿಧಾನ ಪರಿಷತ್ತಿಗೆ ಸತತ ಮೂರನೆ ಬಾರಿಗೆ ಆಯ್ಕೆಯಾದ ಕೋಲಿ ಸಮಾಜದ ಮುಖಂಡರು, ಹ್ಯಾಟ್ರಿಕ್ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಅವರನ್ನು ಜೈ ಕರುನಾಡು ಜನಪರ ಸಮಿತಿಯ ರಾಜ್ಯ ಅಧ್ಯಕ್ಷರು ಸಿದ್ದು ಜಮಾದಾರ ಅವರು ಸನ್ಮಾನಿಸಿದರು**



ಈ ಸಂದರ್ಭದಲ್ಲಿ ಹಿರಿಯ ಕೋಲಿ ಸಮಾಜದ ಮುಖಂಡ ಖ್ಯಾತ ಉದ್ದಿಮೆದಾರ ಶಿವರಾಯ ಕಮಕನೂರ ಹಾಗೂ ಕೋಲಿ ಕಬ್ಬಲಿಗ ಸಮಾಜದ ಜಿಲ್ಲಾ ಅಧ್ಯಕ್ಷ ರವಿರಾಜ್ ಕೋರವಿ.ವಿಜಯಕುಮಾರ ಹದಗಲ್.ಪೀರಪ್ಪ ಸುಲ್ತಾನಪೂರ ಇನ್ನಿತರರು ಉಪಸ್ಥಿತರಿದ್ದರು.

## ದೆಹಲಿ ಕಾರ್ಮಿಕರ ಶಿಬಿರದಲ್ಲಿ ಭೀಕರ ಅಗ್ನಿ ಅವಘಡ

**ಅ.ಶ. ಸುದ್ದಿ ನವದೆಹಲಿ**

**ನವದೆಹಲಿ: ದೆಹಲಿಯ ಉದ್ಯೋಗ ಭವನದ ಬಳಿ ಕಾರ್ಮಿಕರ ಶಿಬಿರದಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿ ಮ ಸುಮಾರು 200ಕ್ಕೂ ಹೆಚ್ಚು ಟಿನ್ ಶೆಡ್ ಮನೆಗಳು ಸುಟ್ಟು ಕರಕಲಾಗಿರುವ ಘಟನೆ ನಡೆದಿದೆ.**



ಉದ್ಯೋಗ ಭವನದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸೆಂಟ್ರಲ್ ವಿಸ್ಟಾ ಪುನರಭಿವೃದ್ಧಿ ಯೋಜನೆಯಡಿ ಧ್ವಂಸ ಕಾರ್ಯ ನಡೆಯುತ್ತಿರುವ ಸಂದರ್ಭದಲ್ಲೇ ಈ ಅಗ್ನಿ ಅವಘಡ ಸಂಭವಿಸಿದೆ.ಮುಂಜಾನೆ 3 ಗಂಟೆ ಸುಮಾರಿಗೆ ವಿದ್ಯುತ್ ಪ್ಯಾನೆಲ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಳಿಕ ಅದೇ ಬೆಂಕಿ ವೇಗವಾಗಿ ಹಬ್ಬಿ ಕಾರ್ಮಿಕರ ತಾತ್ಕಾಲಿಕ ವಸತಿ ಶೆಡ್‌ಗಳನ್ನು ಆವರಿಸಿತು. ಇನ್ನು ಘಟನೆಯ ಮಾಹಿತಿ ದೊರೆಯುತ್ತಿದ್ದಂತೆಯೇ ಅಗ್ನಿಶಾಮಕ ದಳದ 20 ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಲಾಯಿತು ಎಂದು ದೆಹಲಿ ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.

## 'ವಚನಾಮೃತ'

ಇರುಳಿನಲ್ಲಿ ಬೆಳಕನ್ನು ಹುಡುಕುವ
ಕುರುಡಿ ನಾನು,,! ತಾಮಸವೆ ತುಂಬಿದ
ಎನ್ನ ಮನದೊಳಗೆ ಸಾತ್ವಿಕ ಸತ್ವವೆಲ್ಲಿ
ಸಿಗುವುದು,,,,! ಇರುಳಾದರೇನು?
ಹಗಲಾದರೇನು? ಕಣ್ಣಿಲ್ಲದ ಗಾವಿಲಳು
ನಾನು ಮತ್ತೇನೇನೋ ಬಯಸಿ
ಮನದೊಳಗೇಕೆ ಬೇಯಲಯ್ಯ
ಸತ್ಯವಾಣಿ!!.



ವಾಣಿ ಭಂಡಾರಿ.

# ತಂಬಾಕು ಸೇವನೆ ಜೀವನಕ್ಕೆ ಮಾರಕ : ನಾಗೇಶ ಎಂ

**ಅ.ಶ. ಸುದ್ದಿ ಕುಕನೂರು**




**ಕುಕನೂರು: ತಂಬಾಕು ಸೇವನೆಯಿಂದ ಬಾಯಿ ಹುಣ್ಣು, ಕ್ಯಾನ್ಸರ್ ನಂತಹ ಮಾರಕ ಖಾಯಿಲೆಗಳಿಗೆ ಮನುಷ್ಯ ಬಲಿಯಾಗುತ್ತಿದ್ದು, ಪ್ರತಿಯೊಬ್ಬರು ತಂಬಾಕಿನಿಂದ ದೂರವಿರಬೇಕು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಾಗೇಶ ಹೇಳಿದರು.**

ಅವರು ಬುಧವಾರದಂದು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಬಾಯಿ ಅರಿವು ಹಾಗೂ ಪೌರ ಕಾರ್ಮಿಕರಿಗೆ ತಂಬಾಕು ಮುಕ್ತ ಅರಿವು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ-ಯಾಗಿ ಭಾಗವಹಿಸಿ ಮಾತನಾಡಿದರು. ನಂತರ ಸಮುದಾಯ ಆರೋಗ್ಯ ಕೇಂದ್ರದ ದಂತ ವೈದ್ಯಾಧಿಕಾರಿ ಸುಷ್ಮಾ ಜಿ ಮಾತನಾಡಿ ಇಂದಿನ ದಿನಗಳಲ್ಲಿ ಪ್ರತಿಯೊಬ್ಬರು ಒಂದಲ್ಲಾ, ಒಂದು ಹವ್ಯಾಸಗಳಿಂದ ತಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದು ಆರೋಗ್ಯದ ಬಗ್ಗೆ ಜಾಗೃತಿವಹಿಸಬೇಕು ಎಂದರು.

ಬಡ ಪೌರ ಕಾರ್ಮಿಕರು ತಮ್ಮ ಕೆಲಸದ ಒತ್ತಡದ ಮದ್ಯೆ ತಂಬಾಕು, ನಶೆ ಪುಡಿಯಂತಹ ಚಟಗಳಿಗೆ ಅಂಟಿಕೊಂಡಿದ್ದು ಇದರಿಂದ ಬಾಯಿಯಲ್ಲಿ ಹುಣ್ಣುಗಳಾಗಿ, ಕ್ಯಾನ್ಸರ್ ಬರುವುದಲ್ಲದೇ ಜೀವ ಮಾನವಿಡಿ ದುಡಿದ ಹಣವನ್ನು ಆಸ್ಪತ್ರೆಗೆ ವ್ಯಯಿಸುವಂತಾಗುತ್ತದೆ. ಹಣ ಹೋದರು ಮರಳಿ ತಮ್ಮ ಆರೋಗ್ಯವಂತ ಜೀವನ ತರಲಾಗದು ಆದ-್ದರಿಂದ ಪ್ರತಿಯೊಬ್ಬರು ತಂಬಾಕು ಮುಕ್ತ ಜೀವನ ನಡೆಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ವಿದ್ಯಾ ನಾಗರೆಡ್ಡಿ ಎಬಿ, ಎಂಟಿಎಸ್ ಮಂಜುನಾಥ ಹಿರೇಮನಿ, ಎಚ್‌ಐಒ ಕಾಳಪ್ಪ ಕುಂಬಾರ್, ಹದಿ ಹರೆಯದವರ ಆಪ್ತ ಸಮಾಲೋಚಕ ಕಳಕಪ್ಪ ಬಂಡಿ, ಎನ್.ಸಿ. ಡಿ ನರ್ಸಿಂಗ್ ಆಫೀಸರ್ ಕೃಷ್ಣರಾವ್ ದೇಶಪಾಂಡೆ, ಎನ್,ಸಿ,ಡಿ ಡಿ,ಇ,ಓ , ರಮ್ಯಾ ತೊಂಡಿಹಾಳ, ಪಪಂ ಸಿಬ್ಬಂದಿ ಬಸವರಾಜ ಆರಬೆರಳಿನ್ ಹಾಗೂ ಪಟ್ಟಣ ಪಂಚಾಯತ್ ಎಲ್ಲಾ ಪೌರಕಾರ್ಮಿಕರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ಕ.ರ.ಯು ವೇದಿಕೆಗೆ ಉಪಾಧ್ಯಕ್ಷರಾಗಿ ಈರಣ್ಣ ಉಮಚಗಿ



**ಅ.ಶ. ಸುದ್ದಿ ಕುಕನೂರು**

**ಕುಕನೂರು: ಸಂಘಟನೆಗಳು ಕೇವಲ ತಮ್ಮ ಸ್ವ ಹಿತಕ್ಕಿಂತ ಸಮಾಜದಲ್ಲಿ ನಡೆಯುವ ಭ್ರಷ್ಟಾಚಾರ, ಶೋಷಣೆ, ಅತ್ಯಾಚಾರ, ಜಾತಿಯತೆಯ ಬಗ್ಗೆ ಧ್ವನಿ ಎತ್ತುವ ಮೂಲಕ ಸಮಾಜಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸಂಘಟನೆಗಳು ಕಾರ್ಯ ನಿರ್ವಹಿಸಬೇಕು ಎಂದು ಕರ್ನಾಟಕ ರಕ್ಷಣಾ ಯುವಗಜ ವೇದಿಕೆ ರಾಜ್ಯಾಧ್ಯಕ್ಷ ಖಾಸಿಂ ಅಲಿ ಹೇಳಿದರು.**

ಅವರು ಜೂ. 20ರ ಶನಿವಾರದಂದು ಕುಕನೂರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಕ್ಷಣಾ ಯುವಗಜ ವೇದಿಕೆ ಕುಕುನೂರು ತಾಲೂಕ ಯುವ ಘಟಕ ಉಪಾಧ್ಯಕ್ಷರಾಗಿ ಈರಣ್ಣ ಉಮಚಗಿ ನೇಮಕ ಕಾರ್ಯಕ್ರಮದಲ್ಲಿ ಮಾತನಾಡಿ ಪ್ರತಿ ತಿಂಗಳು ಸಂಘಟನೆಯ ಹೋರಾಟಗಳ ಬಗ್ಗೆ ಹಾಗೂ ಸಂಘಟನೆಯ ಕಾರ್ಯ ಚಟುವಟಿಕೆಗಳ ಬಗ್ಗೆ ತಿಂಗಳಿಗೊಮ್ಮೆ ಕೇಂದ್ರ ಕಛೇರಿಗೆ ತಲುಪಿಸಬೇಕು ಹಾಗೂ ನಮ್ಮ ಸಂಘಟನೆಯ ಇತರೆ ಪದಾಧಿಕಾ-ರಿಗಳೊಂದಿಗೆ ಸಹಕರಿಸಬೇಕು ಎಂದು ತಿಳಿಸಿದರು. ನಂತರ ಕುಕನೂರು ತಾಲೂಕಾಧ್ಯಕ್ಷ ಮಂಜುನಾಥ ಮಾಲಗಿತ್ತಿ ಮಾತಾಡಿ ಕನ್ನಡ, ನೆಲ, ಜಲ, ಭಾಷೆ, ಮತ್ತು ಕನ್ನಡಿಗರ ರಕ್ಷಣೆಗಾಗಿ ಬಲಪಡಿಸುವಲ್ಲಿ ಮತ್ತು ಕನ್ನಡಪರ ಹೋರಾಟಗಳನ್ನು ಮುನ್ನಡೆಸುವಲ್ಲಿ ಸಂಘಟನೆ ಪಾತ್ರ ಪ್ರಮುಖವಾಗಿದೆ, ಕನ್ನಡಿಗರ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡುತ್ತಿರಬೇಕು ಎಂದು ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಕುಮಾರ ಹೀರಮಠ, ಮಹಿಳಾ ಜಿಲ್ಲಾಧ್ಯಕ್ಷೆ ಶಶಿಕಲಾ ,ಜಿಲ್ಲಾ ಗೌರವಾಧ್ಯಕ್ಷ ರವಿ ಹಿರೇಮನಿ, ಜಿಲ್ಲಾ ಉಪಾಧ್ಯಕ್ಷ ಪ್ರಭು, ಮಹಿಳಾ ತಾಲೂಕು ಅಧ್ಯಕ್ಷೆ ಮಂಜುಳಾ ಗುಡ್ಲಾನೂರ, ತಾಲೂಕು ಉಪಾಧ್ಯಕ್ಷ ಗುರುಮೂರ್ತಿ ಹಿರೇಮಠ, ತಾಲೂಕು ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀಕಾಂತ್ ಮ್ಯಾಗಳಮನಿ, ವಿದ್ಯಾರ್ಥಿ ಘಟಕದ ಉಪಾಧ್ಯಕ್ಷ ಈರಣ್ಣ ,ರೈತ ಘಟಕದ ಅಧ್ಯಕ್ಷ ಹನುಮೇಶ್ ಹಿರೇಮನಿ, ತಾಲೂಕು ಕಾರ್ಯದರ್ಶಿ ಮಂಜುನಾಥ ಭಾವಿಮನಿ, ಪ್ರಚಾರ ಸಮಿತಿ ಹನುಮಂತ ದೊಡ್ಡಮನಿ ಸೇ-ರಿದಂತೆ ಇನ್ನಿತರ ಪದಾಧಿಕಾರಿಗಳು ಇದ್ದರು.

## ತುಂಗಭದ್ರಾ ಜಲಾಶಯದ ನೂತನ ಸ್ಪಿಲ್ ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮ: ಸಂಸದರು, ಶಾಸಕರಿಂದ ಅಂತಿಮ ಹಂತದ ಸಿದ್ದತೆ ಪರಿಶೀಲನೆ

**ಅ.ಶ. ಸುದ್ದಿ ಕೊಪ್ಪಳ**



**ಕೊಪ್ಪಳ: ಜೂನ್ 25ರಂದು ನಡೆಯಲಿರುವ ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿದ 33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದ ಅಂಗವಾಗಿ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲೆಯ ಸಂಸದರಾದ ಕೆ.ರಾಘವೇಂದ್ರ ಹಿಟ್ನಾಳ, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ರಾಯಚೂರು ವಿಧಾನ ಪರಿಷತ್ ಶಾಸಕರಾದ ಎನ್.ಎಸ್. ಭೋಸರಾಜು ಅವರು ವೇದಿಕೆ ಸ್ಥಳದ ಅಂತಿಮ ಹಂತದ ಸಿದ್ದತೆಯನ್ನು ಪರಿಶೀಲಿಸಿದರು.**

ಈ ವೇಳೆ ಕೊಪ್ಪಳ ಶಾಸಕರಾದ ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ ಹಾಗೂ ವಿಧಾನ ಪರಿಷತ್ ಶಾಸಕರಾದ ಎನ್.ಎಸ್. ಭೋಸರಾಜು ಅವರು ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭ ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಗಳಾದ ಡಾ. ಸುರೇಶ್ ಬಿ. ಇಟ್ನಾಳ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ, ಬಳ್ಳಾರಿ ವಲಯದ ಐಜಿಪಿ ಡಾ.ಪಿ.ಎಸ್. ಹರ್ಷ, ಗಂಗಾವತಿ ಡಿವೈಎಸ್ಪಿ ನ್ಯಾಮಗೌಡ ಹಾಗೂ ಕೊಪ್ಪಳ ಡಿವೈಎಸ್‌ಪಿ ಮುತ್ತಣ್ಣ ಸವರಗೊಳ ಅವರು ವೇದಿಕೆ, ಭದ್ರತಾ ವ್ಯವಸ್ಥೆ, ವಾಹನ ನಿಲುಗಡೆ, ಸಂಚಾರ ನಿರ್ವಹಣೆ, ಕುಡಿಯುವ ನೀರು, ವಿದ್ಯುತ್ ಹಾಗೂ ಸಾರ್ವಜನಿಕರ ಸೌಲಭ್ಯಗಳ ಕುರಿತು ಅಧಿಕಾ-ರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಕೊಪ್ಪಳ ನಗರಸಭೆಯ ಮಾಜಿ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹಾಜರಿದ್ದರು. ಕಾರ್ಯಕ್ರಮಕ್ಕೆ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ವಿವಿಧ ಗಣ್ಯರು ಆಗಮಿಸುವ ಹಿನ್ನೆಲೆಯಲ್ಲಿ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದೆ. ಪೊಲೀಸ್ ಇಲಾಖೆ, ನೀರಾವರಿ ಇಲಾಖೆ, ಆರೋಗ್ಯ ಇಲಾಖೆ, ಅಗ್ನಿಶಾಮಕ ದಳ ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗುತ್ತಿದೆ. ಈ ಮಹತ್ವದ ಸಮಾರಂಭಕ್ಕೆ ಸಾವಿರಾರು ಜನರು ಆಗಮಿಸುವ ನಿರೀಕ್ಷೆಯಿದ್ದು, ಸುಗಮ ಸಂಚಾರ ಮತ್ತು ಭದ್ರತೆಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ.

# ನವಲಿ ಸಮಾನಾಂತರ ಜಲಾಶಯ ಅನುಷ್ಠಾನಕ್ಕೆ ಕ್ಯಾವಟರ್ ಆಗ್ರಹ

**ಅ.ಶ. ಸುದ್ದಿ ಕೊಪ್ಪಳ**




**ಕೊಪ್ಪಳ: ತುಂಗಭದ್ರಾ ನದಿಯು ಜಿಲ್ಲೆಯಲ್ಲಿ ಹ-ರಿಯುತ್ತಿದ್ದರೂ ಕೊಪ್ಪಳ ಜಿಲ್ಲೆಯ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವುದು ದುರದೃಷ್ಟಕರ. ನವಲಿ ಸಮಾನಾಂತರ ಜಲಾಶಯ ಯೋಜನೆಯನ್ನು ಶೀಘ್ರವಾಗಿ ಘೋಷಿಸಿ ಅನುಷ್ಠಾನಗೊಳಿಸಬೇಕು ಎಂದು ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಡಾ. ಬಸವರಾಜ ಕ್ಯಾವಟರ್ ಆಗ್ರಹಿಸಿದರು.**

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ತುಂಗಭದ್ರಾ ಕ್ರಸ್ಟ್ ಗೇಟ್ ಮು-ರಿದು ಎರಡು ವರ್ಷಗಳಾದರೂ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ. ಸುಮಾರು 50 ಕೋಟಿ ರೂ. ವೆಚ್ಚ ಮಾಡಿ ಗೇಟ್ ದುರಸ್ತಿ ಮಾಡಲಾಗಿದೆ. ಆದರೆ ಜಲಾಶಯದ ಭವಿಷ್ಯದ ಸುರಕ್ಷತೆ ಹಾಗೂ ನೀರಿನ ಸಂಗ್ರಹಣೆ ಬಗ್ಗೆ ಸರ್ಕಾರ ಸ್ಪಷ್ಟವಾದ ಕ್ರಮ ಕೈಗೊಳ್ಳಬೇಕಿದೆ ಎಂದರು. ನವಲಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆ 2026ರಲ್ಲಿ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸಲಾಗುವುದು ಎಂದು ಸರ್ಕಾರ ಹೇಳಿತ್ತು. ಆದರೆ ಈ ಯೋಜನೆ ಯಾವಾಗ ಆರಂಭವಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ನವಲಿ ಜಲಾಶಯದಲ್ಲಿ ಸುಮಾರು 30 ಟಿಎಂಸಿ ನೀರು ಸಂಗ್ರಹಣೆ ಮಾಡುವುದಾಗಿ ಹೇಳಲಾಗಿತ್ತು. ಆದರೆ ಪ್ರತಿವರ್ಷ ಸುಮಾರು 30 ಟಿಎಂಸಿ ಹೂಳು ತುಂಬುವ ಸಮಸ್ಯೆ ಎದುರಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಪ್ಪಳ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ತುಂಗಭದ್ರಾ ನದಿ ಇದ್ದರೂ ಜನರಿಗೆ ಸಮರ್ಪಕ ಕುಡಿಯುವ ನೀರು ದೊರೆಯುತ್ತಿಲ್ಲ. ಆದರೆ ಪಕ್ಕದ ಜಿಲ್ಲೆಗಳಾದ ವಿಜಯನಗರ, ಬಳ್ಳಾರಿ ಹಾಗೂ ಗದಗ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಉತ್ತಮವಾಗಿದೆ. ಗದಗ ಜಿಲ್ಲೆಯು ಎತ್ತರದ ಪ್ರದೇಶವಾಗಿದ್ದರೂ ಅಲ್ಲಿನ ಜನ-ರಿಗೆ ನೀರಿನ ಸಮಸ್ಯೆ ಕಡಿಮೆ ಇದೆ. ಆದರೆ ಕೊಪ್ಪಳ ಜಿಲ್ಲೆಗೆ ಮಾತ್ರ ಈ ಪರಿಸ್ಥಿತಿ ಏಕೆ ಎಂಬುದನ್ನು ಸರ್ಕಾರ ಜನರಿಗೆ ತಿಳಿಸಬೇಕು ಎಂದು ಹೇಳಿದರು. ಜಿಲ್ಲೆಯ ಪ್ರಮುಖ ಯೋಜನೆಗಳಾದ ಸಿಂಗಟಾಲೂರು ಏತ ನೀರಾವರಿ ಯೋಜನೆ ಹಾಗೂ ಹಿರೇಹಳ್ಳ ಯೋಜನೆಗಳ ಪ್ರಗತಿ ಏನಾಗಿದೆ ಎಂಬುದು ಜನರಿಗೆ ತಿಳಿಯದಾಗಿದೆ. ಈ ಯೋಜನೆಗಳ ಬಗ್ಗೆ ಸರ್ಕಾರ ಸ್ಪಷ್ಟ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಲಿರುವ ಕಾರ್ಯಕ್ರಮದಲ್ಲಿ ನವಲಿ ಸಮಾನಾಂತರ ಜಲಾಶಯ ಯೋಜನೆಯನ್ನು ಬಹಿರಂಗವಾಗಿ ಘೋಷಣೆ ಮಾಡಬೇಕು. ಮೂರು ರಾಜ್ಯಗಳ ನಡುವಿನ ನೀರಿನ ಹಿತಾಸಕ್ತಿ ಹಾಗೂ ರೈತರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಗೆ ಆದ್ಯತೆ ನೀಡಬೇಕು ಎಂದು ಡಾ. ಬಸವರಾಜ ಕ್ಯಾವಟರ್ ಆಗ್ರಹಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಬಿಜೆಪಿ ಜಿಲ್ಲಾ ಅಧ್ಯಕ್ಷ ನವೀನ ಗುಳಗಣ್ಣವರ ಸೇ-ರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

## ಪ್ರೀತಿಯನ್ನೇ ಹಾಸುಂಡು ಬೀಸಿರುವ

# ‘ಮನಸಿನ ಮಾತು’

ಕನ್ನಡದಲ್ಲಿ ಈಚೆಗೆ ತುಂಬಾ ಪ್ರಭಾವಶಾಲಿಯಾಗಿ ಬರೆಯಲ್ಪಡುತ್ತಿರುವ ಕಾವ್ಯಪ್ರಕಾರಗಳಲ್ಲಿ ಶಾಯಿರಿ ಕೂಡಾ ಒಂದು.1980 ರ ದಶಕದಲ್ಲಿ ಇಟಗಿ ಈರಣ್ಣ ನವರಿಂದ ಆರಂಭವಾದ ಈ ಕಾವ್ಯ ಪ್ರಕಾರ ಮುಂದೆ ಅಸಾದುಲ್ಲಾ ಬೇಗ್ , ಡಾ .ಅಶೋಕ ಸಮಗಂಡಿ, ಪ್ರೊ .ಭಿಕ್ಷಾವರ್ತಿಮಠ ಮೊದಲಾದವರಿಂದ ಇನ್ನೂ ಹೆಚ್ಚು ವ್ಯಾಪಕವಾಯಿತು. ಈಚಿನ ದಿನಮಾನಗಳಲ್ಲಿ ಅನೇಕ ಯುವ ಸಾಹಿತಿಗಳು ಈ ಪ್ರಕಾರವನ್ನು ರಚಿಸುತ್ತಿದ್ದು, ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಇದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿರುವುದಕ್ಕೆ ಅನೇಕ ಕಾರಣಗಳೂ ಇವೆ . ಮೊದಲ ಕಾರಣವೇ ಈ ಶಾಯಿರಿ ಪ್ರಕಾರಕ್ಕೆ ಒಗ್ಗುವ ಜವಾರಿ ಭಾಷೆ ಈ ಭಾಗದ್ದು ಆಗಿರುವುದು ಇರಬೇಕು.

ಈಗ ಸಧ್ಯಕ್ಕೆ ಶಾಯಿರಿಗಳನ್ನು ಬರೆಯುತ್ತಿರುವವರಲ್ಲಿ ಚಿತ್ರದುರ್ಗದ ಪರಮೇಶ್ವರಪ್ಪ ಕುದರಿ ಯವರು ಪ್ರಮುಖರಾಗಿದ್ದಾರೆ. ಈಗಾಗಲೇ ಅವರು “ ಪ್ರೀತಿ ಪ್ರೇಮ ಪ್ರಣಯ” ಎಂಬ ಶಾಯಿರಿ ಸಂಕಲನ ತಂದಿದ್ದರು. ಈಗ ಅವರ ಎರಡನೆಯ ಶಾಯಿರಿ ಸಂಕಲನ “ಮನಸಿನ ಮಾತು” ಈಚೆಗೆ ಪ್ರಕಟವಾಗಿದ್ದು ,ಇದಕ್ಕೆ ಖ್ಯಾತ ವಿಮರ್ಶಕರಾದ ಡಾ.ಮಲ್ಲಿನಾಥ .ಎಸ್ .ತಳವಾರ ಅವರ ಮುನ್ನುಡಿ ಇದೆ. ವಿಶೇಷವೆಂದರೆ ಅವರ ಬಾಳಸಂಗಾತಿಯಾದ ಶ್ರೀಮತಿ ವಿಜಯಾ ಪ್ರಸಾದಮಠ ಅವರ ಬೆನ್ನುಡಿ ಇದೆ. ಈ ಶಾಯಿರಿಗಳ ಸಂಗಾತಿಯೂ ಅವರೇ ಆಗಿರುವುದು ಅವರ ಬೆನ್ನುಡಿಯಿಂದ ಈ ಸಂಕಲನಕ್ಕೆ ಒಂದು ಅರ್ಥಪೂರ್ಣತೆ ದೊರಕಿದೆ.

150 ಶಾಯರಿಗಳ ಆತ್ಮ ಎಲ್ಲ ಶಾಯಿರಿ ಸಂಕಲನಗಳಂತೆ ಪ್ರೇಮವೇ ಆಗಿರುವುದೆಂದು ಮತ್ತೆ ಬೇರೆ ಹೇಳಬೇಕಿಲ್ಲ. ಇಡೀ ಸಂಕಲನದ ಜೀವ ಅಂದ್ರೆ ಪ್ರೀತಿಯ ಕಾರುಬಾರು ಎನ್ನಬಹುದು. ಶಾಯರ್ ಎಂದರೆ ಕವಿ ಎಂಬ ಅರ್ಥದ ಜೊತೆಗೆ ಪ್ರೇಮಿ ಎಂಬ ಅರ್ಥವೂ ಇದೆಯೇನೊ!. ಪ್ರೇಮ ಮತ್ತು ಶಾಯಿರಿಗಳ ನಡುವೆ ಅಷ್ಟೊಂದು ಸಾಮ್ಯವಿರುತ್ತದೆ. ಒಂದರ್ಥದಲ್ಲಿ ಪ್ರೇಮವೇ ಶಾಯಿರಿ ಕಾವ್ಯದ ಆತ್ಮ ಎನ್ನಬಹುದು . ಇದು ಪರಮೇಶ್ವರಪ್ಪ ಕುದರಿಯವರಿಗೂ ಅರಿವಿರುವ ಮಾತೇ ಆಗಿದೆ. ಅವರ ಕವಿತೆಯ ಮೂಲ ಪ್ರೇರಣೆಯೂ ಅಂತಹ ಒಂದು ಪ್ರೇಮದ ಸಂಗಾತಿಯೇ ಆಗಿರುವುದು ಈ ಕೆಳಗಿನ ಶಾಯಿರಿ ಓದು ನಮಗೆ ತಿಳಿಸುತ್ತದೆ.

ಬಾಳ ಮಂದಿ ಹೇಳ್ತಾರ ನನಗ
ನೀವು ಬಾಳ ಚಂದ ಶಾಯರಿ ಬರಿತೀರಿ ಅಂತ!!
ನಾನಂದೆ ಬಾಳ ಚಂದ ನಾ ಬರಿಯೂದಿಲ್ಲ
ನನ್ನಿಂದ ಬರಸಗೊಳ್ಳಾಕಿ
ಬಾಳ ಚಂದ ಅದಾಳ ಅಂತ!

ಅಂದರೆ ಕಾವ್ಯದ ಹಿಂದಿನ ಪ್ರೇರಣೆ ಅವರ ಸಂಗಾತಿಯೇ ಅಗಿರುವುದು ಕಾಣುತ್ತದೆ. ಕವಿ ಯಾವುದೇ ಪ್ರೇರಣೆ ಇಲ್ಲದೇ ಕವಿತೆ ಬರೆಯಲಾರ. ಅವನ ಸುಂದರ ರಚನೆಯ ಹಿಂದೆ ಇರುವ ಸುಂದರ ಮನಸ್ಸನ್ನು ಕುರಿತು ಅನೇಕ ಸಾಲು ಶಾಯಿರಿಗಳಲ್ಲಿ ಬರೆದಿದ್ದಾರೆ ಕೂಡ.


ಒಮ್ಮೊಮ್ಮೆ ಆ ಸೌಂದರ್ಯೇದೊಡತಿ ವಾಸ್ತವದಲ್ಲಿ ನಿಜವಾಗುತ್ತಿಲ್ಲ. ಕನಸಲ್ಲಿ ನಿಜವಾಗುವ ಆಕೆ ವಾಸ್ತವದಲ್ಲಿ ನಿಜವಾಗದ ಬಗ್ಗೆ ಅವರಿಗೆ ಬೇಸರಿಕೆ ಇದೆ. . ಅವಳು ದೊರೆತಾಗ ,ಜೊತೆಗಿದ್ದಾಗ ಖುಷಿ ಪಡುತ್ತೇನೆ ಎನ್ನುವ ಇಲ್ಲಿನ ಪ್ರೇಮಿ ಅವಳು ಸಿಗದೇ ಇದ್ದಾಗ ಕೊರಗುತ್ತಾನೆ. ಅವಳು ಜೊತೆಗಿದ್ದರೆ ಸದಾ ಸುಖವೇ ಎನ್ನುವ ಆತ ಅವಳನ್ನು ಕೊಡೆಗೆ ಹೋಲಿಸುತ್ತಾನೆ. ಮಳೆಯಿಂದ ಕೊಡೆ ರಕ್ಷಿಸುವಂತೆ ತನ್ನವಳು ತನ್ನನ್ನು ರಕ್ಷಿಸುತ್ತಾಳೆ ಎಂದು ನಂಬಿದ್ದಾರೆ .

ಮಳಿ ಎಷ್ಟರ ಬರಲಿ ಕೈಯಾಗ ಒಂದು
ಛತ್ರಿಇದ್ದರ ಸಾಕು
ಬೆಚ್ಚಗಿರಬಹುದು!!
ಜೀವನದಾಗ ಎಷ್ಟರ ಕಷ್ಟ ಬರ್ಲಿ
ನೀ ಜೊತೆಗಿದ್ರ
ಸುಖವಾಗಿರಬಹುದು!

ಎನ್ನುತ್ತಾನೆ ಕವಿ.ಅದು ಅವನು ಪ್ರೀತಿಯ ಮೇಲಿಟ್ಟಿರುವ ಅಭಿಮಾನ. ಅದು ನಿಜವೂ ಆಗಿಬಿಡುತ್ತದೆ. ಶಾಯಿರಿಗಳ ತುಂಬ ತುಂಬಿದ ಅವಳು ಇಲ್ಲಿ ಢಾಳಾಗಿ ಕಾಣಿಸುತ್ತಾಳೆ. ಕೆಲವದರಲ್ಲಿ ಕನಸು ಕಾಣುವೆ ಎನ್ನುವ ಕವಿ ಒಮ್ಮೊಮ್ಮೆ ಬೇಜಾರಾಗಿ ಕನಸು ಕಾಣುವದನ್ನು ಬಿಡುವ ತೀರ್ಮಾನ ಮಾಡುತ್ತಾನೆ. ಅವಳ ನಗೆಗಾಗಿ ಜೀವನ ಪರ್ಯಂತ ಕಾಯುತ್ತೇನೆ ಎನ್ನುವ ಅವನ ದಿಲ್ ಗೆದ್ದದ್ದು ಅವಳ ನಗೆ ಎನ್ನುತ್ತಾನೆ. ಅದಕ್ಕಾಗಿಯೇ ಆತ ನಿನ್ನೆ ,ಇಂದು ,ನಾಳೆ ಅವಳಿಗಾಗಿ ಕಾಯುತ್ತೇನೆ ಎನ್ನುತ್ತಾನೆ.ಅವನದು ಬದಲಾಗುವ ಪ್ರೇಮವಲ್ಲ!

ಯಾರರ ಏನರ ತಿಳಕೊಳ್ಳಿ
ನಾ ಹೇಳೂದಿಷ್ಟ!!
ಈ ದಿಲ್ ನಿನ್ನೆನೂ ನಿಂದ ಇತ್ತು
ಇವತ್ತೂ ನಿಂದ ಐತಿ
ನಾಳೆನೂ ನಿಂದ ಇರತೈತಿ!

ಪ್ರೀತಿ ಮಾಡಿದವವಳು ತನ್ನನ್ನು ತಿರಸ್ಕರಿಸಿದಾಗ ದೇವರು ಬಂದು, ಅವಳು ನಿನ್ನ ತಿರಸ್ಕರಿಸಿದ್ದಾಳೆ ಅವಳಿಗೆ ಏನು ಶಿಕ್ಷೆ ಕೊಡಲಿ ಎಂದು ಕೇಳಿದರೆ, ಏನೂ ಬೇಡ ನನ್ನ ಪ್ರೀತಿಸುವಂಥ ಮನಸು ಕೊಡು ಎಂದು ಕೇಳುವಷ್ಟು ಗಾಢವಾಗಿ ಪ್ರೀತಿಸುವವನಾಗಿದ್ದಾನೆ.ಅವಳೊಮ್ಮೆ ಪ್ರೀತಿಯಿಂದ ತನ್ನ ಹೆಸರು ಕರೆದರೂ ಸಾಕು , ತಾನು ಕೃತಾರ್ಥ




ಎನ್ನುವಂಥ ನಿಷ್ಠೆ ಅವರ ಪ್ರೇಮಕ್ಕಿದೆ. ಅಂತೆಯೇ ಅವರು

ಒಂದೇ ಒಂದ್ಸಲ ನನ್ನ ಹೆಸರು
ಕರದು ಬಿಡು!!
ನಕ್ಕೊಂತ ಸತ್ತ ಹೋಗ್ತೀನಿ !

ಎನ್ನುತ್ತಾರೆ. ಇದೇ ಪ್ರೀತಿಯ ಕರಾಮತ್ತು. ಅವಳು ತನ್ನೊಡನೆ ಇರುವವರೆಗೆ ಮಾತ್ರ ಜೀವನ ಸಾಕು ಎನ್ನುವ ಇಲ್ಲಿನ ಪ್ರೇಮಿ ಅವಳಿಲ್ಲದ ದಿನ ಈ ಜಗತ್ತಿನ ಗೊಡವೆ ಬೇಡ ಎನ್ನುವ ನಿರ್ಧಾರವನ್ನೂ ತಾಳಿದ್ದಾನೆ. ಪ್ರೇಮಿಗಳನ್ನು ಜಗತ್ತು ಹುಚ್ಚ ಎಂದು ತಿಳಿಯುವುದೇ ಜಾಸ್ತಿ. ಒಮ್ಮೊಮ್ಮೆ ಅವರು ತಮ್ಮಷ್ಟಕ್ಕೆ ತಾವೇ ಮಾತನಾಡುತ್ತ , ನಗುತ್ತ ಇರುತ್ತಾರೆ. ಇಲ್ಲಿಯ ಪ್ರೇಮಿಯೂ ಇದೇ ವರ್ಗಕ್ಕೆ ಸೇರಿದವನು. ಆದರೆ ಆತ ತಾನು ತನ್ನಷ್ಟಕ್ಕೆ ನಗುತ್ತ ಇರುವುದರ ಬಗ್ಗೆ ನಮಗೆ ಸಮಜಾಯಿಷಿ ಕೊಡುವುದು ಹೀಗೆ.

ನಾನೊಬ್ನ ನಗತಿರತಿನಿ ಅಂದ್ರ
ನನ್ನ ಹುಚ್ಚ ಅಂತ
ತಿಳಕೊಳ್ಳಲೇ ಬ್ಯಾಡ್ರಿ !!
ನಾನು,ನನ್ನೊಳಗಿರೋ
ನನ್ನಾಕಿ ಕೂಡ ಮಾತಾಡ್ತ
ಮಾತಾಡ್ತ ನಗತಿರತೀನಿ!

ಪ್ರೇಮಿಯ ಹೃದಯವೇ ಅವನ ಪ್ರೀತಿಗೆ ಸ್ಥಾನ . ನಿಜವಾಗಿ ಪ್ರೀತಿಸಿದವರ ಹೃದಯದಲ್ಲಿ ಅವರ ಪ್ರೀತಿ ಇರುತ್ತದೆ ಎನ್ನುವ ಭಾವ ಇಲ್ಲಿದೆ. ಒಮ್ಮೊಮ್ಮೆ ಪ್ರೇಮಿಯ ಪ್ರೇಮದ ಗಾಢತೆ ಎಂಥಹದಾಗಿರುತ್ತದೆ ಎಂದರೆ ಅದು ಸಾವಿನಾಚೆಗೂ ತನ್ನ ಪ್ರೇಮಿ ತನ್ನೊಡನೆ ಇರಲಿ ಎಂದು ಬಯಸುತ್ತದೆ. ಇಲ್ಲೊಬ್ಬ ಪ್ರೇಮಿಯ ಅಲೋಚನೆ ನೋಡಿ

ನನ್ನ ಜೀವನದ ಕೊನೆ ಹೆಂಗಿರಬೇಕಂದ್ರ
ನನ್ನ ಗೋರಿಮ್ಯಾಲೆ
ಅಕಿ ಮನಿ ಕಟ್ಟಿರಬೇಕು!!
ನೆಲದ ಮ್ಯಾಲ ಹಾಸ್ಗೊಂಡು
ಮಲಗಿದಾಗೆಲ್ಲ ಆಕಿ ತಲಿ
ನನ್ನ ಎದಿಗೆ ತಾಗಿದಂಗಿರಬೇಕು!

ನಾನು ಸತ್ತರೂ ಅವಳ ತಲೆ ತನ್ನ ಗೋರಿಗೆ ತಾಕುತ್ತಿರಲಿ ಎನ್ನುವ ಗಾಢ ಪ್ರೇಮ ಅವನದಾಗಿದೆ ಎನ್ನುವ ವಿಸ್ಮಯ ನಮಗಾಗುತ್ತದೆ. ಹೀಗೆ ಬಹುತೇಕ ಶಾಯಿರಿಗಳು ಪ್ರೀತಿಯ ರಂಗೋಲಿಯಂತೆ ಇವೆ. ಅವಳು ದೊರೆತರೆ ಖುಷಿ , ಇಲ್ಲವಾದರೆ ನೋವು, ಕನಸಲ್ಲಿ ಬರುವ ಅವಳು ನನಸಲ್ಲಿ ಬಾರದ ಬಗ್ಗೆ ವಿಷಾದ ..ಹೀಗೆ ಅನೇಕ ಭಾವಗಳು ಶಾಯಿರಿ ಯಾಗಿವೆ.

ನಾವು ಶಾಯಿರಿ ಅಂದ್ರ ಬರಿ ಪ್ರೇಮ ವಿರಹ ಅಂತ ತಿಳಿದಿದ್ದೇವೆ. ಆದರೆ ಪರಮೇಶ್ವರಪ್ಪ ಕುದರಿಯವರ ಶಾಯಿರಿಗಳು ಅದರಾಚೆಗೂ ವ್ಯಾಪಿಸಿ ಇಡೀ ಬದುಕೇ ಶಾಯಿರಿಗೆ ವಸ್ತುವಾಗಬಲ್ಲುದು ಎನ್ನುವದನ್ನು ಸೂಚಿಸುತ್ತವೆ . ತಾಯಿಯ ಪ್ರೀತಿ , ವಾತ್ಸಲ್ಯ ಎಂಥದು ಅನ್ನುವದನ್ನು ಒಂದು ಶಾಯಿರಿ ಹೀಗೆ ಸಾರಿದೆ

ತಾಯಿ ಕರುಳು ಅನ್ನೋದು
ಖರೇನ ಬಹಳ ವಿಚಿತ್ರ
ಅಂದ್ರ ಬಾಳ ವಿಚಿತ್ರ ಇರತೈತಿ!!
ದಿನಾಲೂ ನಾಕ ರೊಟ್ಟಿ ತಿನ್ನೂ ಮಗ
ಒಂದ ರೊಟ್ಟಿ ಕಡಮಿ ತಿಂದ್ರು
ಅದು ಚುರ್ ಅಂತೈತಿ !

ಇದೇ ತಾಯಿಯ ಮಮತೆ ಅಲ್ಲವೇ?ಮಗು ಊಟ ಮಾಡದೆ ಇರುವುದು,ಕಡಿಮೆ ಊಟಾ ಮಾಡುವುದು ಹಡೆದ ಕರುಳಿಗೆ ತಾನಾಗಿಯೇ ತಿಳಿಯುತ್ತದೆ.ದಿನವೂ ನಾಲ್ಕು ರೊಟ್ಟಿ ತಿನ್ನುತ್ತಿದ್ದ ಮಗ ಒಂದು ರೊಟ್ಟಿ ಕಡಿಮೆ ತಿಂದರೆ ಅವಳ ಚಿಂತೆಗೆ ಕಾರಣವಾಗುತ್ತದೆ. ಮಕ್ಕಳ ಮನಸ್ಸು ಅರ್ಥವಾಗಿರೋದು ತಾಯಿಗೆ ಮಾತ್ರ. ಆಕೆ ಅವರು ಸದಾ ಉಂಡು ಕೊಂಡಿರಲಿ ಎನ್ನುತ್ತಾಳೆ.

ಸ್ನೇಹದ ಕುರಿತು ಕೆಲವು ಶಾಯಿರಿಗಳು ಕುತೂಹಲ ಮೂಡಿಸುತ್ತವೆ .ನಿಜವಾದ ಸ್ನೇಹಿತ ಜೀವಕ್ಕೆ ಜೀವ ಕೊಡಬೇಕು ಎನ್ನುವುದು ಅವರ ಸ್ನೇಹದ ವ್ಯಾಖ್ಯಾನ ವಲ್ಲ.ಸ್ವಾರ್ಥ ತುಂಬಿದ ಸ್ನೇಹ ಸ್ನೇಹವಲ್ಲ ಎನ್ನುವ ಅವರು ಯಾರು ಸ್ನೇಹವನ್ನು ಪ್ರೀತಿಯಾಗಿ ಪರಿವರ್ತನೆ ಮಾಡುತ್ತಾರೋ ಅವರೇ ನಿಜವಾದ ಸ್ನೇಹಿತರು ಎನ್ನುತ್ತಾರೆ?

ಮುಖ ನೋಡಿ ಮುಗುಳು
ನಗೋನು ಸ್ನೇಹಿತನಲ್ಲ
ಜೀವಕ್ಕ ಜೀವ ಕೊಡೋನು ಸ್ನೇಹಿತನಲ್ಲ!!
ಈ ಜಗದಾಗ ನಿಜವಾದ ಸ್ನೇಹಿತ
ಯಾರಂದ್ರ ಸ್ನೇಹಕ್ಕೆ
ಪ್ರೀತಿಯ ಹೆಸರು ಕೊಡೋನು ಸ್ನೇಹಿತ!

ಸ್ನೇಹದ ಬಲ ಅದು. ಸ್ನೇಹದಲ್ಲಿ ಸಂಬಂಧ ಪ್ರೀತಿಯಾಗಿ ಪರಿವರ್ತನೆ ಆಗಬೇಕು.ಇಲ್ಲಿ ಪ್ರೀತಿ ಎಂದರೆ ಗಂಡು ಹೆಣ್ಣಿನ ನಡುವಿನ ಕಾಮನೆಯಿಂದ ಕೂಡಿದ್ದಲ್ಲ.ಅದು ನಿಷ್ಕಲ್ಮಶವಾದದ್ದು .ಅಂಥ ಪ್ರೀತಿಯನ್ನು ತೋರಬಲ್ಲವನು ಮಾತ್ರ ಸ್ನೇಹಿತನಾಗಬಲ್ಲ ಎಂಬ ಅಪರೂಪದ ಶಾಯಿರಿಯನ್ನು ಬರೆದ ಲೇಖಕರು ತಮಗಾದ ಫಜೀತಿಯ ಪ್ರಸಂಗವೊಂದನ್ನು ಶಾಯಿರಿ ಮಾಡುತ್ತಾರೆ.

ನೌಕರಿದಾರರಿಗೆ ತಮ್ಮ ಮೇಲಿನ ಅಧಿಕಾರಿ ಬಂದರೆ ಅವರ ಎದುರಿಗೆ ಹೋಗದೆ ತಪ್ಪಿಸಿಕೊಳ್ಳುವುದು ರೂಢಿ. ಇಲ್ಲೂ ಹಾಗೆಯೇ ಆಗಿದೆ. ಆದರೆ “ಎದುರಿಗೆ ಬಿ .ಇ. ಒ ಬಂದರು ಅಂತ ತಪ್ಪಿಸಿಕೊಂಡು ಹೋಗಿ ಡಿ.ಡಿ.ಪಿ.ಐ ಗೆ ಡಿಕ್ಕಿ ಹೊಡೆದ “ ಎಂಬ ಶಾಯಿರಿ ಬರೆಯುತ್ತಾರೆ.

ಬದುಕಿನ ತಾತ್ವಿಕ ಚಿಂತನೆ ಇಲ್ಲಿ ಕೆಲವೊಮ್ಮೆ ಹಾದು ಹೋಗುತ್ತದೆ. ಜೀವನ ಅಂದರೆ ಏನೆಂದು ಚಿಂತಿಸುತ್ತ ಕೂಡುವುದರೊಳಗೆ ಜೀವನವೇ ಮುಗಿದು ಹೋಗಿರುತ್ತದೆ. ಅದರ ಬಗ್ಗೆ ಯೋಚಿಸಲೇ ಬೇಡಿ ಅದನ್ನು ಜೀವಿಸುತ್ತ ಹೋಗಿ ಎನ್ನುವ ಕವಿ

ಜೀವನ ಅಂದ್ರ ಏನಂತ
ಅರ್ಥ ಹುಡುಕಾಕ ಹೋಗಬ್ಯಾಡ!!
ನಿನ್ನ ಆಯಸ್ಸು ಪೂರ್ತಿ ಮುಗದರೂ
ಜೀವನ ಅಂದ್ರ ಏನಂತ
ಅರ್ಥಾನ ಆಗುದಿಲ್ಲ!

ಎಂಬ ತಿಳಿವಳಿಕೆ ನೀಡುತ್ತಾರೆ. ಏಕೆಂದರೆ ಯಾವು ದೇ ಬಗೆಯ ಚಿಂತನೆ ಅಲೋಚನೆಗಳು ಜೀವನವನ್ನು ಪರಿಚಯ ಮಾಡಿಸಲಾರವು . ಅದರ ಪರಿಚಯಕ್ಕಿರುವ ಒಂದೇ ದಾರಿ ಅದನ್ನು ಜೀವಿಸುತ್ತ ಹೋಗುವುದು.


ಕೆಲವು ಶಾಯಿರಿಗಳ ತುಂಟತನ ಖುಷಿ ಕೊಡುವಂತಿದೆ.ತನ್ನ ಪ್ರೇಮಿಯನ್ನು ಸಂಧಿಸಿ ಅವಳಿಗೆ ಮುತ್ತು ಕೊಡಬೇಕೆಂದು ಹೋದರೆ ಅವಳ ಅಮ್ಮ ಬಾಗಿಲು ತೆಗೆಯಬೇಕೆ? “ಮಕ್ಕಳಿಗೆ ಪೋಲಿಯೋ ಹಾಕಸ್ರಿ “ ಎಂದು ಹೇಳಿ ಬಂದೆ ಎಂದು ನಗೆಯುಕ್ಕಿಸುವ ಶಾಯಿರಿ ಕೂಡ ಒಂದೆಡೆ ಇದೆ. ತಾನು ಶಹಾಜಹಾನನಂತೆ ತನ್ನವಳಿಗಾಗಿ ತಾಜಮಹಲ್ ಕಟ್ಟಬೇಕೆಂದರೆ ಯಾವ ಬ್ಯಾಂಕೂ ಸಾಲ ಕೊಡಲಿಲ್ಲ ಎಂದು ಕವಿ ಹಾಸ್ಯ ಮಾಡುತ್ತಾರೆ.ಅವರ ಇಂಥಹ ಚಟಾಕಿಗಳು ಶಾಯಿರಿಗಳ ಏಕತಾನತೆಗೆ ತುಸು ಬಿಡುವು ಕೊಡುತ್ತವೆ.

ಆದರೆ ಸಂಕಲನದ ತುಂಬ ತುಂಬಿರುವ ಪ್ರೇಮದ ಚಿತ್ರಣ ಕೆಲವೊಮ್ಮೆ ಒಂದೇ ಭಾವದ ಸುತ್ತ ಸುತ್ತುವ ಕಾರಣ ಅದೇ ಅದೇ ವಿಷಯ ಪುನರಾವರ್ತಿತವಾದಂತಿದೆ. ಒಂದೇ ವಿಷಯವನ್ನು ಕುರಿತು ಬರೆಯುವಾಗ ಒಂದಿಷ್ಟು ಪುನರಾವರ್ತನೆ ಎನಿಸುತ್ತದೆ. ಅದು ಅನಿವಾರ್ಯವೂ ಕೂಡ ! ಶಾಯಿರಿ ಕಾವ್ಯ ಪ್ರಕಾರವನ್ನು ತುಂಬಾ ಗಾಢವಾಗಿ ಹಚ್ಚಿಕೊಂಡಿರುವ ಪರಮೇಶ್ವರಪ್ಪ ಕುದರಿಯವರು ಈ ಕ್ಷೇತ್ರದಲ್ಲಿ ಇನ್ನಷ್ಟು ಹೆಚ್ಚಿನದನ್ನು ಸಾಧಿಸಲಿ ಎಂಬ ಹಾರೈಕೆ ಓದುಗರದಾಗಿದೆ.



ಡಾ.ವೈ.ಎಂ.ಯಾಕೊಳ್ಳಿ
ಸಾಹಿತಿಗಳು , ಸವದತ್ತಿ

## ಗಜಲ್



ಎಷ್ಟೇ ತೇಯ್ದರೂ ಸುಗಂಧ ಸೂಸುವ ಶ್ರೀಗಂಧದಂತೆ ನನ್ನಪ್ಪ
ತಾನೇ ದಹಿಸಿದರೂ ಬೆಳಕು ನೀಡುವ ದೀಪದಂತೆ ನನ್ನಪ್ಪ

ಬದುಕಿನಲಿ ಕಂಡ ಕಷ್ಟ ಕೋಟಲೆ ಬೇಗುದಿಗಳು ಅಗಣಿತ
ಬೆಂಕಿಯಲಿ ಬೆಂದು ಗಟ್ಟಿಗೊಂಡ ಮಡಕೆಯಂತೆ ನನ್ನಪ್ಪ


ಅವಮಾನದ ನಂಜು ನುಂಗುತಲೇ ಕಂಬನಿ ಮರೆಸಿದವರು
ವಿಷವುಂಡರೂ ಜಗ್ಗದ ಕುಗ್ಗದ ನೀಲಕಂಠನಂತೆ ನನ್ನಪ್ಪ

ಸರಳ ಸಜ್ಜನ ವಾತ್ಸಲ್ಯಮೂರ್ತಿಯ ನಾ ಹೇಗೆ ಮರೆಯಲಿ
ಮೊಗದಿ ಮಂದಹಾಸ ರೂಪದಲಿ ಶ್ರೀರಾಮನಂತೆ ನನ್ನಪ್ಪ

ಗಳಿಸಿದ ಸಂಪತ್ತಿಗೆ ಹಿಗ್ಗದೇ ಪರರ ಆಪತ್ತಿಗೆ ಹೆಗಲಾದವರು
ಔದಾರ್ಯಕೆ ಮಿತಿಯೇ ಇಲ್ಲ ಮಹಾದಾನಿ ಕರ್ಣನಂತೆ ನನ್ನಪ್ಪ

ನಂಬಿಕೆಯ ಬೆನ್ನಿಗಿರಿದು ನೋಯಿಸಿದವರೆಷ್ಟೋ ತಿಳಿಯದು
ಹೆಂಗರುಳ ಪುರುಷ ಕ್ಷಮಾ ಗುಣದಲಿ ಧರಿತ್ರಿಯಂತೆ ನನ್ನಪ್ಪ

ಅಸಾಮಾನ್ಯ ಸಾಧಕ ಸಾಮಾನ್ಯನಂತೆ ಬಾಳಿದರು ಹೇಮ
ಪ್ರೀತಿಯಲಿ ಸದಾ ನೆರಳು ನೀಡುವ ಅಶ್ವತ್ಥ ವೃಕ್ಷದಂತೆ ನನ್ನಪ್ಪ...



ಎ.ಹೇಮಗಂಗಾ, ಮೈಸೂರು.

# ತಂದೆಯಂದಿರ ದಿನದ ವಿಶೇಷ ‘ಅಪ್ಪ’

ಜೂನ್ 21ರಂದು ವಿಶ್ವ ಅಪ್ಪಂದಿರ ದಿನ. ಅಪ್ಪ ಐ ಲವ್ ಯೂ ಅಪ್ಪ. ಫಾದರ್ಸ್ ಡೇ ದಿನದ ಅರ್ಥ ಮತ್ತು ತಂದೆಯ ಮಹತ್ವವನ್ನು ತಿಳಿದುಕೊಳ್ಳಬೇಕು. ಅಪ್ಪ ಅಮ್ಮ ದೇವರ ಸಮಾನ. ಅಪ್ಪ ಎಂದರೆ ಬೆಳಕು. ಅಪ್ಪನಿಂದಲೇ ಈ ಬದುಕು.. ಅಪ್ಪನ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ತಂದೆಯ ಸ್ಥಾನ ಮತ್ತು ಅಪ್ಪ ಅಮ್ಮನ ಪ್ರೀತಿ ಅತ್ಯಮೂಲ್ಯವಾದದ್ದು.

ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕುವರು ಅಪ್ಪ. ಅಂತಹ ತಂದೆ ತಾಯಿಗೆ ನಾವು ಯಾವಗಲೂ ಗೌರವದಿಂದ ಕಾಣಬೇಕು. ಅದು ನಮ್ಮ ಕರ್ತವ್ಯ ಕೂಡ. ಅಪ್ಪ ನೀ ದೇವರು ಈ ಜಗವೆಲ್ಲಾ ನೀನೆ ಅಪ್ಪ. ಅಪ್ಪ ಎಂಬ ಎರಡಕ್ಷರ ಪವಿತ್ರವಾದ ಸಂಕೇತ. ಹೌದು ಅಪ್ಪ ಅಮ್ಮ ದೇವರ ಸ್ವರೂಪ. ನಾವು ದೇವರನ್ನು ಎಷ್ಟು ಭಯ ಭಕ್ತಿಯಿಂದ ಗೌರವದಿಂದ ಪೂಜಿಸಿ ಆರಾದಿಸುತ್ತೇವೆಯೋ ಹಾಗೇಯೇ ಅಮ್ಮ ಅಪ್ಪನ ಭಯ ಭಕ್ತಿಯಿಂದ ಗೌರವದಿಂದ ನೋಡಿಕೊಳ್ಳಬೇಕು. ಅಪ್ಪ ಇಲ್ಲದ ಪ್ರಪಂಚವಿಲ್ಲ.ಎಲ್ಲಾ ಮಕ್ಕಳಿಗೂ ತಂದೆ ತಾಯಿಯ ಆಶೀರ್ವಾದ ಬೇಕು ಅವರಿಂದಲೇ ನಾವು. ತಾಯಿ ಮೊದಲ ಗುರು ಮನೆಯ ಮೊದಲ ಪಾಠ ಶಾಲೆ ತನ್ನ ಮಕ್ಕಳಿಗೆ ಮೊದಲನೆಯ ಶಿಕ್ಷಕಿ ತಾಯಿ.



ಮಗು ತನ್ನ ಜೀವನದಲ್ಲಿ ಹೇಳುವ ಮೊದಲ ಪದವೂ ಅಮ್ಮ ಅಪ್ಪ ಎಲ್ಲಾ ಮಕ್ಕಳ ಪಾಲಿಗೆ ಅಪ್ಪನೇ ಮೊದಲ ಹೀರೋ. ಅಪ್ಪ ಮಗುವಿನ ತೋರು ಬೆರಳು ಹಿಡಿದು ತನ್ನ ಸುತ್ತ ಮುತ್ತ ಇಡೀ ಜಗತ್ತನೇ ತೋರಿಸುತ್ತಾರೆ. ಅಪ್ಪ ಅಂದರೆ ಜಗತ್ತು ಅಪ್ಪ ಅಂದರೆ ದೇವರು ಅಪ್ಪ ಅಂದರೆ ಶಕ್ತಿ ಅಪ್ಪ ಅಂದರೆ ಆಕಾಶ ಅಪ್ಪ ಅಂದರೆ ಸ್ನೇಹಿತ ಅಪ್ಪ ಅಂದರೆ ಪಪ್ರಂಚ ಅಪ್ಪ ಅಂದರೆ ಪ್ರೀತಿ ಅಪ್ಪ ಅಂದರೆ ಬೆಳಕು ಅಪ್ಪ ಅಂದರೆ ಸಂತೋಷ ಹೀಗೆ ಎಷ್ಟು ಅರ್ಥಗಳಿವೆ. ಅಪ್ಪ ಮಕ್ಕಳನ್ನು ಬೈಯುವುದಕ್ಕೆ ಮುಖ್ಯ ಕಾರಣ ನಾವು ಮಾಡಿರೋ ತಪ್ಪನ್ನು ಮತ್ತೇ ಮಾಡಬಾರದು ಮತ್ತು ನಮಗೆ ಯಾವ ಕೆಡಕು ಆಗಬಾರದು ಅಂತ ಎಷ್ಟೇ ಬೈದ್ರೂ ಮನಸ್ಸಲಿ ಬೆಟ್ಟದಷ್ಟು ಪ್ರೀತಿ ಇರುತ್ತದೆ.

ತನಗೆ ಎಷ್ಟೇ ಕಷ್ಟ ನೋವು ಬಂದ್ರು ತನ್ನ ಮಕ್ಕಳು ನಮ್ಮ ಕುಟುಂಬ ಖುಷಿಯಾಗಿ ಸಂತೋಷವಾಗಿ ಇರಬೇಕು ಎಂದು ಬಯಸುವರು ಅಪ್ಪ. ಮಕ್ಕಳು ಕೇಳಿದ್ದನ್ನೆಲ್ಲಾ ಕೊಡಿಸೋಕ್ ಆಗದೇ ಇದ್ರೂ ಕೈಲಾಗಿದ್ದನ್ನ ಕೊಡಿಸುವರು ಅಪ್ಪ. ಬೇಡಿದಷ್ಟು ಕೊಡದೇ ಹೋದ್ರು ಸಲ್ಪವಾದರು ಕೊಡಿಸುವರು ತನ್ನಿಂದ ಸಾಧಿಸೋಡಕ್ಕಾಗದೇ ಇರೋದನ್ನ ತನ್ನ ಮಕ್ಕಳಿಂದ ಮಾಡಿಸೋಡಕ್ಕೆ ಪ್ರಯತ್ನ ಮಾಡುವರು. ಎಷ್ಟೇ ಕಷ್ಟಗಳು ನೋವುಗಳು ಬಂದರು ತನ್ನಲ್ಲಿಟ್ಟುಕೊಂಡು ಮಕ್ಕಳನ್ನು ಪ್ರೀತಿ ಮಾಡುವರು ಅಪ್ಪ. ಅಪ್ಪ ಯಾವಗಲೂ ತನ್ನ ದುಃಖಗಳನ್ನು ಮರೆತು ಮಕ್ಕಳ ಜೀವನ ಸಂತೋಷದ ಬಗ್ಗೆ ಯೋಚಿಸುತ್ತಾರೆ. ಮಕ್ಕಳು ಸಂತೋಷವಾಗಿರುವುದು ನೋಡಿ ಅವರು ಸಂತೋಷವಾಗಿರುತ್ತಾರೆ. ತಂದೆ ತಾಯಿಯ ಋಣವನ್ನು ನಾವು ಎಂದಿಗೂ ತೀರಿಸಲು ಸಾಧ್ಯವಿಲ್ಲ ಆದ್ದರಿಂದ ನಾವು ನಮ್ಮ ತಂದೆ ತಾಯಿಗೆ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಲು ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟ ಜೀವನದ ಪ್ರತಿಯೊಂದು ಸಂತೋಷವನ್ನು ನಾವು ತಾಯಿ ತಂದೆಗೇ ನೀಡಬೇಕು. ಅಪ್ಪ ಐ ಲವ್ ಯೂ...!



ವಿ.ಎಂ.ಎಸ್.ಗೋಪಿ

# ಪಿಎಂಪಿಬಿವೈ ಯೋಜನೆ ಪ್ರಗತಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಬೆಳೆ ಹಾನಿ ಆರ್ಥಿಕ ನಷ್ಟದಿಂದ ಪಾರಾಗಲು ವಿಮಾ ಮಾಡಿಸಿ

ಅ.ಶ. ಸುದ್ದಿ ಗದಗ

**ಗದಗ: 2026–27 ರ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೆಳೆ ನಷ್ಟದಿಂದ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಅರ್ಹ ರೈತರ ನೋಂದಣಿಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ನಿರ್ದೇಶನ ನೀಡಿದರು.**

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬಿಮಾ ಯೋಜನೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಗ್ರಾಮೀಣ ಮಟ್ಟದಲ್ಲಿ ರೈತ–ರಿಗೆ ಯೋಜನೆ ಕುರಿತು ಜಾಗೃತಿ ಮೂಡಿಸಿ ನೋಂದಣಿಗೆ ಕ್ರಮ ವಹಿಸಬೇಕೆಂದರು. ಹವಾಮಾನ ವೈಪರೀತ್ಯ, ಅತೀವೃಷ್ಟಿ



ಅನಾವೃಷ್ಟಿ, ಗಾಳಿ ಮಳೆ ಪ್ರವಾಹ ಸೇ–ರಿದಂತೆ ವಿವಿಧ ಪ್ರಕೃತಿ ವಿಕೋಪಗಳಿಂದ ಬೆಳೆ ಹಾನಿಗೊಳಗಾದ ಸಂದರ್ಭದಲ್ಲಿ ರೈತರಿಗೆ ಸೂಕ್ತ ಪರಿಹಾರ ದೊರೆಯಲು ಬೆಳೆ ಕಟಾವು ಪ್ರಯೋಗಗಳನ್ನು ಪಾರದರ್ಶಕವಾಗಿ ಮತ್ತು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗೆ ಇಂಡಸ್ ಇಂಡ್ ಜನರಲ್ ಇನ್ಸೂರನ್ಸ್ ಕಂಪನಿ ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆಯಾಗಿರುತ್ತದೆ. ಕಂಪನಿಯ ಪ್ರತಿನಿಧಿಗಳು ಪ್ರತಿ ತಾಲೂಕಾ ಕಚೇರಿಗೆ ಸರಿಯಾಗಿ ಕೆಲಸ ಮಾಡುವ ಪ್ರತಿನಿಧಿಗಳನ್ನು ನಿಯೋಜನೆ ಮಾಡಬೇಕು ಎಂದರು. ಆಸಕ್ತ ರೈತರು ಬೆಳೆ ವಿಮೆ ತುಂಬಲು ಕೊನೆಯ ದಿನಾಂಕದವರೆಗೆ ಕಾಯದೇ



ಮುಂಚಿತವಾಗಿ ಬೆಳೆ ವಿಮೆ ತುಂಬುವಂತಾಗಬೇಕು. ಬೆಳೆ ವಿಮೆ ಮಾಡಿಸುವ ರೈತರು ಈಡಿಋಣ ಈಖಆ ಅನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ರೈತರು ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ ಪುಸ್ತಕ / ಕಂದಾಯ ರಶೀದಿಯನ್ನು ಸಂಬಂಧಿಸಿದ ಬ್ಯಾಂಕ,ಹತ್ತಿರದ ಸಾರ್ವಜನಿಕ ಸೇವಾಕೇಂದ್ರ (Common Service Centre ), ಗ್ರಾಮ ಒನ್ ಕೇಂದ್ರಗಳಲ್ಲಿ ನೀಡಿ "ಸಂರಕ್ಷಣೆ ಪೋರ್ಟಲ್" ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು.

ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ಚೇತನಾ ಪಾಟೀಲ ಮಾತನಾಡಿ ಬೆಳೆವಾರು ವಿಮಾ ಕಂತು ಪಾವತಿ ಕುರಿತು ಮಾಹಿತಿ ನೀಡಿದರು.

ಬೆಳೆ ಸಾಲ ಪಡೆದ ರೈತರಿಗೆ ಈ ಯೋಜನೆ ಕಡ್ಡಾಯವಾಗಿದ್ದು ಒಂದು ವೇಳೆ ಬೆಳೆ ಸಾಲ ಪಡೆದ ರೈತರು ಈ ಯೋಜನೆಯಡಿ ಭಾಗವಹಿಸದೇ ಇದ್ದಲ್ಲಿ ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತ ಮುಚ್ಚಳಿಕೆ ಪತ್ರ ನೀಡಿದಲ್ಲಿ ಅಂತಹ ರೈತರನ್ನು ಈ ಯೋಜನೆಯಿಂದ ಕೈಬಿಡಲಾಗುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಕುರಿತು ಭಿತ್ತಿ ಪತ್ರ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ್ ಎಂ.ವಿ, ಡಿಡಿಎಲ್ ಆರ್ ರುದ್ರಣ್ಣಗೌಡ, ಕೃಷಿ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಸ್ಫೂರ್ತಿ , ಸಹಾಯಕ ಕೃಷಿ ನಿರ್ದೇಶಕರುಗಳು, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

1ನೇ ಪುಟದಿಂದ....

ಶಿಕ್ಷಣದಲ್ಲಿ 13,600 ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇವೆ. ರಾಜ್ಯ ಸರ್ಕಾರ 15 ಸಾವಿರ ಶಿಕ್ಷಕರ ನೇಮಕಾತಿಗೆ ಮುಂದಾಗಿದೆ. ಇಂತಹ ಸಂದರ್ಭದಲ್ಲಿ ಶಿಕ್ಷಣ ಸಚಿವರಿಲ್ಲದೇ ಇರುವುದು ಭಾರೀ ಕೊರತೆಯಾಗಿ ಕಾಣಿಸುತ್ತಿದೆ. ಪಠ್ಯಪುಸ್ತಕ, ಶೂ, ಸಾಕ್ಸ್, ಸಮವಸ್ತ್ರ ವಿತರಣೆಯಾಗಬೇಕು. ಬಿಸಿಯೂಟ ಯೋಜನೆ ಕ್ರಮ ಬದ್ಧಗೊಳ್ಳಬೇಕು. ರಾಜ್ಯ ಶಿಕ್ಷಣ ನೀತಿಯ ಪ್ರಕಾರ ಪಠ್ಯಕ್ರಮ ಬದಲಾಗಬೇಕು. ಸರ್ಕಾರಿ ಶಾಲೆಗಳಲ್ಲಿ ಮೇಲ್ಛಾವಣಿ ಕುಸಿದು ಕೆಲವೆಡೆ ಅವಘಡಗಳಾಗಿವೆ. ಶಾಲೆಗಳಿಗೆ ಕಟ್ಟಡ, ಕುಡಿಯುವ ನೀರು, ಶೌಚಾಲಯ ಸೇ–ರಿದಂತೆ ಮೂಲ ಸೌಲಭ್ಯಗಳ ಕೊರತೆ ಗಂಭೀರವಾಗಿದೆ. ಅವುಗಳತ್ತ ಗಮನ ಹರಿಸಬೇಕಿತ್ತು. ಈ ಹಿಂದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾಗಿದ್ದ ಮಧು ಬಂಗಾರಪ್ಪ ಅವರು ಮೂರು ಹಂತದ ಪರೀಕ್ಷೆ ವ್ಯವಸ್ಥೆಗಳನ್ನು ಜಾರಿಗೆ ತಂದು ರಾಷ್ಟ್ರ ಮಟ್ಟದಲ್ಲಿ ಮಾದರಿ ಎನಿಸಿಕೊಂಡಿದ್ದರು. ಕೆಪಿಎಸ್ ಶಾಲೆಗಳಿಗೆ ಸಿಎಸ್‌ಆರ್ ನಿಧಿ ಬಳಸಿ ಅಭಿವೃದ್ಧಿ ಪಡಿಸಲು ಸಾಕಷ್ಟು ಚರ್ಚೆಗಳಾಗಿದ್ದವು. ಶಿವಮೊಗ್ಗದಲ್ಲಿ ಅಧಿಕೃತವಾಗಿ ಕಾರ್ಯಕ್ರಮ ಉದ್ಘಾಟನೆಯಾಗಬೇಕಿತ್ತು. ಅಷ್ಟರಲ್ಲಿ ನಾಯಕತ್ವ ಬದಲಾವಣೆಯಾಗಿ ಸರ್ಕಾರವೂ ಬದಲಾಯಿತು. ಮೊದಲ ಹಂತದ ಸಂಪುಟ ವಿಸ್ತರಣೆಯಲ್ಲೇ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧುಬಂಗಾರಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡು ಖಾತೆ ನಿರ್ವಹಣೆಗೆ ಅವಕಾಶ ಮಾಡಿಕೊಡಬಹುದು ಎಂಬ ಅಂದಾಜುಗಳಿದ್ದವು. ಆದರೆ ಲೋಕೋಪಯೋಗಿ, ಬೃಹತ್ ಕೈಗಾರಿಕೆಯಂತಹ ಖಾತೆಗಳಿಗೆ ಹಿಂದಿನ ಸಚಿವರನ್ನೇ ಮುಂದುವರಿಸಲಾಗಿದೆ. ಶಿಕ್ಷಣ, ಕೃಷಿಯಂತಹ ಖಾತೆಗಳನ್ನು ಕಡೆಗಣಿಸುವುದು ಚರ್ಚೆಗೆ ಗ್ರಾಸವಾಗಿದೆ. ಎರಡನೇ ಹಂತ ಸಂಪುಟ ವಿಸ್ತರಣೆಯಾಗಬಹುದು. ಶಿಕ್ಷಣ ಮತ್ತು ಕೃಷಿಗೆ ಸಚಿವರ ನೇಮಕವಾಗಬಹುದು ಎಂಬ ನಿರೀಕ್ಷೆಗಳು ಇನ್ನೂ ಈಡೇರಿಲ್ಲ. ಹೊಸ ಸರ್ಕಾರ ರಚನೆಯಾಗಿ ತಿಂಗಳು ಸಮೀಪಿಸಲಾರಂಭಿಸಿವೆ. ಸಂಪುಟ ವಿಸ್ತರಣೆಯೂ ನಡೆದಿಲ್ಲ, ಪ್ರಮುಖ ಖಾತೆಗಳಿಗೆ ಸಚಿವರಿಲ್ಲದೇ ಕೆಲಸ ಕಾರ್ಯಗಳು ಕುಂಠಿತವಾಗುತ್ತಿರುವುದು ಕಂಡು ಬರುತ್ತಿದೆ.

# ಸಹಕಾರ ಕ್ಷೇತ್ರದ ಸಿಬ್ಬಂದಿಗಳಿಗೆ ತರಬೇತಿ

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ) ಕಾರಟಗಿ ಇವರ ಸಂಯುಕ್ತ ಆಶ್ರಯದಲ್ಲಿ ಸಾಲ ವಿತರಣೆ, ಸಾಲ ವಸೂಲಾತಿ, ಬಂಗಾರದ ಸಾಲ, ವಾಹನ ಸಾಲ, ದಾವಾ ಪಂಚಾಯತ್ ಹಾಗೂ ಸಾಲದ ಜಪ್ತಿ ಕು–ರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಕಾರಟಗಿಯಲ್ಲಿ ಆಯೋಜಿಸಲಾಯಿತು.**

ಶ್ರೀ ವೇದಮೂರ್ತಿ ಮರಳು ಸಿದ್ದಯ್ಯ ಸ್ವಾಮಿ ಹಿರೇಮಠ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮವನ್ನು ವಿಕಾಸ್ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಹಿರೇಮಠ ಅವರ ಸಮ್ಮುಖದಲ್ಲಿ ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ದೊಡ್ಡಪ್ಪ ದೇಸಾಯಿ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.




ನಂತರ ದೊಡ್ಡಪ್ಪ ದೇಸಾಯಿ ಮಾತನಾಡಿ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಎಂಬ ತತ್ವವೇ ಬೆಳೆದು ಬಂದಿದೆ. ಸಹಕಾರ ಸಂಸ್ಥೆಗಳು ಇತರ ಸಂಸ್ಥೆಗಳಿಗಿಂತ ಭಿನ್ನವಾಗಿದ್ದು, ತಮ್ಮದೇ ಆದ ವೈಶಿಷ್ಟ್ಯದಿಂದ ಜನ–ರಿಗಾಗಿ, ಜನರಿಂದಲೇ ಆಡಳಿತ ನಡೆಸುವ ಪ್ರಜಾಪ್ರಭುತ್ವದ ಪಾಠಶಾಲೆಗಳಾಗಿವೆ ಎಂದರು.

ಕಷ್ಟ,ನಷ್ಟದ ಸಂದರ್ಭಗಳಲ್ಲಿ ಪರಸ್ಪರ ಸಹಕಾರ, ನೆರವು ನೀಡುವ ಗುಣ ಸಹಕಾರ ಸಂಸ್ಥೆಗಳ ಅಂತರಂಗ ಶಕ್ತಿಯನ್ನು ಹೆಚ್ಚಿಸುತ್ತದೆ. ಸಹಕಾರ ಸಂಸ್ಥೆಗಳು ಪ್ರಜಾಪ್ರಭುತ್ವದ ಶಾಲೆಗಳು ಎಂಬ ಮಾತಿಗೆ ತಕ್ಕಂತೆ ನಡೆ–ನುಡಿಗಳನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯ ತರಬೇತಿದಾರರಾದ ಮಧುಶ್ರೀ ಜಿ.ಎಸ್, ಕಾರಟಗಿ ತಾಲೂಕು ಸಹಕಾರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮರಯ್ಯಸ್ವಾಮಿ ಸಾಲಿಮಠ ಸೇರಿದಂತೆ ತಾಲೂಕು ಸಂಘಗಳ ಆಡಳಿತ ಮಂಡಳಿ ಸದಸ್ಯರು, ಕೊಪ್ಪಳ, ಗದಗ ಹಾಗೂ ಸಿಂಧನೂರು ಜಿಲ್ಲೆಗಳ ಸಹಕಾರ ಮತ್ತು ಸೌಹಾರ್ದ ಕ್ಷೇತ್ರದ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

# ಸಾಧನೆಗೆದೇಹದಸೌಂದರ್ಯ,ಸದೃಢತೆಜೊತೆಮನಸ್ಸುಹತೋಟಿಯಲ್ಲಿಇಟ್ಟುಕೊಳ್ಳಬೇಕು' ಡಿ.ಸಿಸುರೇಶ್



**ಬೇವೂರು ಶ್ರೀ ಸಿದ್ದರಾಮೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ನಶಾ ಮುಕ್ತ ಭಾರತ ಅಭಿಯಾನ ಹಾಗೂ ಮದ್ಯ ಮಾದಕ ವ್ಯಸನಗಳ ಕುರಿತು ಅರಿವು ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಿ.ಸಿ ಸುರೇಶ್ ಮಾತನಾಡಿದರು.**

ಗುರಿ ಸಾಧನೆಗೆ ದೇಹ ಮತ್ತು ಮನಸ್ಸು ಪೂರಕವಾಗಿ ಮತ್ತು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಯುವಜನರು ಹೆಚ್ಚು ಮೊಬೈಲ್ ಬಳಕೆ ಮಾಡುತ್ತಿರುತ್ತಾರೆ, ಸಾಮಾಜಿ–ಕ ಜಾಲತಾಣಗಳಲ್ಲಿ ತೊಡಗಿಕೊಂಡಿದ್ದಾರೆ. ಅವಶ್ಯಕವಲ್ಲದ ತಾತ್ಕಾಲಿಕವಾದ ಕ್ಷಣಿಕ ಸುಖಕ್ಕಾಗಿ ತಂಬಾಕು, ಬೀಡಿ, ಸಿಗರೇಟ್ ದಾಸರಾಗಿದ್ದಾರೆ. ಅಲ್ಪ ಸುಖ ಕೊಡುವ ವಿಷಯಗಳಿಗೆ ಮಾರು ಹೋಗಿ ಮುಂದಿನ



ಭವಿಷ್ಯ ಹಾಳು ಮಾಡಿಕೊಳ್ಳುತ್ತಿರುವುದು ಸರಿಯಲ್ಲ ಎಂದುಬೇಸರ ವ್ಯಕ್ತಪಡಿಸಿದರು.

ಕಾರ್ಯದರ್ಶಿಗಳಾದ ಬಿ.ಸಿ ಯೋಗೇಶ್ ಗೌಡ ಮಾತನಾಡಿ, ಉತ್ತೀರ್ಣಕ್ಕೆ ಬೇಕಾಗುವಷ್ಟು ಅಂಕ ಪಡೆಯುವುದು ಒಂದೇ ಗುರಿಯಾಗಬಾರದು. ಓದುವುದು ಅಲ್ಲದೇ ಜೀವನ ರೂಪಿಸಿಕೊಳ್ಳಲು ಎಲ್ಲ ರೀತಿಯಲ್ಲೂ ತಯಾರಾಗಬೇಕು. ಶಿಸ್ತುಬದ್ಧವಾಗಿ, ಪ್ರಾಮಾಣಿಕವಾಗಿದ್ದು, ಉತ್ತಮ ಗುರಿ ಇಟ್ಟುಕೊಂಡು ವ್ಯಾಸಂಗ ಮಾಡಿದರೆ ಮಾತ್ರ ಜೀವನದಲ್ಲಿ ಸಾಧನೆ ಸಾಧ್ಯ ಎಂದು ಹೇಳಿದರು.

ಉಪ ಪ್ರಾಂಶುಪಾಲರಾದ ಗೌರಮ್ಮ ಮಾತನಾಡಿ, ಭಾರತ ನಶೆ ಮುಕ್ತ ದೇಶವಾಗಬೇಕು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಮಾದಕ ವ್ಯಸನಿಗಳಾಗುವ ಮುಂಚೆ ಜಾಗೃತರಾಗಬೇಕು. ಮಾನಸಿಕವಾಗಿ, ಬೌದ್ಧಿಕವಾಗಿ, ಆಂತರಿಕವಾಗಿ ಆಧ್ಯಾತ್ಮಿಕವಾಗಿ ಸುಸ್ಥಿತಿ ಮತ್ತು ಸದೃಢತೆಯಲ್ಲಿರಬೇಕು.

ಇದು ಭಾರತದ ಭವಿಷ್ಯದ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿ ಎಂದರು. ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ತಾಲ್ಲೂಕು ಸಂಂ–ಯೋಜಕ ಪುಟ್ಟಮದು ಕನಸಂದ್ರ ಮಾತನಾಡಿ, ಯುವಕರು ರಾಷ್ಟ್ರದ ಶಕ್ತಿಯಾಗಿದ್ದು, ಸಮಾಜ ಮತ್ತು ದೇಶದ ಅಭಿವೃದ್ಧಿಯಲ್ಲಿ ಯುವಶಕ್ತಿಯು ಪ್ರಮುಖ ಕೊಡುಗೆ ನೀಡುತ್ತದೆ ಎಂದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಶಶಿಕಲಾ, ಶಿಕ್ಷಕರಗಳಾದ ಗಗನ,ಅಮೃತ, ಮಂಜುನಾಥ್, ಸಿಬ್ಬಂದಿಗಳಾದ ಚೈತ್ರ ಅಭಿಷೇಕ್ ಸೇರದಂತೆ ಮಕ್ಕಳು ಉಪಸ್ಥಿತರಿದ್ದರು

## 20.08 ಲಕ್ಷ ರೂ.ಮೊತ್ತದ ಮಾದಕ ವಸ್ತು ನಾಶ

ಅ.ಶ. ಸುದ್ದಿ ಕಲಬುರಗಿ

**ಕಲಬುರಗಿ: ನಗರ ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯ ಒಟ್ಟು 22 ಪ್ರಕರಣಗಳಲ್ಲಿ ವಶಪಡಿಸಿಕೊಂಡ 17,34,000 ಮೌಲ್ಯದ 17 ಕೆ.ಜಿ 634 ಗ್ರಾಂ ಗಾಂಜಾ, Netrazepam NRX Schedule H Drug 14,970 Tablets ಮತ್ತು 18.73 ಗ್ರಾಂ ಒಆಔಂ ಡ್ರಗ್ಸ್ ( ಸಿಂಥೆಟಿಕ್ ಡ್ರಗ್ಸ್) ಹೀಗೆ ಒಟ್ಟು 20,08,300/– ಮೌಲ್ಯದ ಮಾದಕ ವಸ್ತುಗಳನ್ನು ವಾಡಿಯ ಎಸಿಸಿ ಸಿಮೆಂಟ್ ಸಿಮೆಂಟ್ ಕಿಲ್ನ**



ಪರಿಸರ ಅಸೋಸಿಯೆಟ್ಸ್ ಅಧಿಕಾರಿಗಳು, ಮಾದಕ ವಸ್ತುಗಳ ವಿಲೇವಾರಿ ಕಮಿಟಿ ಅಧ್ಯಕ್ಷರು, ಸದಸ್ಯರು ಹಾಗೂ ಪರಿಸರ ಅಧಿಕಾರಿಗಳ ಸಮ್ಮುಖದಲ್ಲಿ ವಿಲೇವಾರಿ ಮಾಡಲಾಯಿತು.

# ಕಲಿಕಾ ಟಾಟಾ ಟ್ರಸ್ಟ್ ಸ್ಪಂದನಾ ಕಾರ್ಯಕ್ರಮ : ಹಿರಿಯ ನಾಗರಿಕರಿಗೆ ಗೌರವ

ಅ.ಶ. ಸುದ್ದಿ ಕುಕನೂರು

**ಕುಕನೂರು: ತಾಲ್ಲೂಕಿನ ಬನ್ನಿಕೊಪ್ಪ ಗ್ರಂಥ–ಾಲಯದಲ್ಲಿ ಕಲಿಕಾ ಟಾಟಾ ಟ್ರಸ್ಟ್ ಸ್ಪಂದನಾ ಕಾರ್ಯಕ್ರಮದ ಅಂಗವಾಗಿ ಗ್ರಾಮದ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು. ಹಿರಿಯ ನಾಗರಿಕರಿಂದ ಕೇಕ್ ಕತ್ತರಿಸುವ ಮೂಲಕ ಸಿಹಿ ಹಂಚಲಾಯಿತು. ಗ್ರಂಥ–ಾಲಯ ಯೋಗಾಸನದ ಬಗ್ಗೆ ಚರ್ಚಿಸಲಾಯಿತು.**

ಪ್ರತಿದಿನ ಹಿರಿಯರು



ಗ್ರಂಥಾಲಯಕ್ಕೆ ಬಂದು ಓದುವದಕ್ಕೆ ಗ್ರಂಥ–ಾಲಯದಲ್ಲಿ ಅವಕಾಶ ಇದೆ. ಗ್ರಾಮದ ಎಲ್ಲಾ ಹಿರಿಯ ನಾಗರಿಕರು ಗ್ರಂಥಾಲಯಕ್ಕೆ ಬಂದು ಪತ್ರಿಕೆಗಳ ಹಾಗೂ ಪುಸ್ತಕಗಳ ಉಪಯೋಗ ಪಡೆದುಕೊಳ್ಳಬೇಕು ಎಂದು ಗ್ರಂಥಪಾಲಕ ನಿಂಗಪ್ಪ ಗೊಂದಿ ಹೇಳಿದರು. ಈ ಸಂದರ್ಭದಲ್ಲಿ ಹಿರಿಯ ನಾಗರಿಕರಾದ ಗುರುಬಸಪ್ಪ ಅಂಗಡಿ, ಪರಪ್ಪ ಅಂಗಡಿ, ಹುಚ್ಚಪ್ಪ ಉಪ್ಪಾರ, ಈರಪ್ಪ ತಳವಾರ, ಶರಣಪ್ಪ ಮಾದಿನೂರು ಅಂದಪ್ಪ ಸೋಂಪುರ, ಮರ್ತುಜಾಸಾಬ ನೂರ್ ಬಾಷಾ, ಸಫಿಯಾಬೇಗಂ, ಜುಬೇರಾ ಕಲ್ಲೂರು, ಪ್ರೇರಕರಾದ ರೇಷ್ಮಾ ರಾಟಿ ಸೇರಿದಂತೆ ಇನ್ನಿತರರು ಇದ್ದರು.

# ಅರ್ಹ ಮತದಾರರ ಹೆಸರು ಕೈಬಿಡದಂತೆ ಎಚ್ಚರಿಕೆ ವಹಿಸಿ: ಶಿವರಾಜ ತಂಗಡಗಿ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ಪಟ್ಟಣದ ಪಿಸಿಎಚ್ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಎಸ್‌ಐಆರ್ ಕುರಿತು ಬಿಎಲ್‌ಎ–2ಗಳಿಗೆ ತರಬೇತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಚಿವ ಶಿವರಾಜ ತಂಗಡಗಿ, ಕಾಂಗ್ರೆಸ್ ಪಕ್ಷದ ಬಿಎಲ್‌ಎ–2ಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು.**

ಮತದಾರರ ಪಟ್ಟಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಹೊಂದಿದ್ದು, ಪ್ರತಿಯೊಬ್ಬ ಅರ್ಹ ಮತದಾರರ ಹೆಸರೂ ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು ಜವಾಬ್ದಾರಿಯಾಗಿದೆ ಎಂದು ಹೇಳಿದರು. ಎಸ್‌ಐಆರ್ ಪ್ರಕ್ರಿಯೆಯ ಪರಿಣಾಮವಾಗಿ ಪಶ್ಚಿಮ




ಬಂಗಾಳ ಹಾಗೂ ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳಿಗೆ ಹಿನ್ನಡೆಯಾಗಿದೆ. ಲೋಕಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಎದುರಾದ ಹಿನ್ನಡೆಗೆ ಎಸ್‌ಐಆರ್ ಕಾರಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಬಿಜೆಪಿ ಹಾಗೂ ಜೆಡಿಎಸ್ ಹೊರತುಪಡಿಸಿ ಇತರೆ ರಾಜಕೀಯ ಪಕ್ಷಗಳು ಎಸ್‌ಐಆರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿವೆ ಎಂದು ಹೇಳಿದರು. ಮಾಜಿ ಸಚಿವ ಅಮರೇಗೌಡ ಬಯ್ಯಾಪುರ ಮಾತನಾಡಿ, ಚುನಾವಣಾ ಪ್ರಕ್ರಿಯೆಯಲ್ಲಿ ಬಿಎಲ್‌ಎ–2ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಚುನಾವಣಾ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮತದಾರರ ಪಟ್ಟಿಯಲ್ಲಿನ ಪ್ರತಿಯೊಂದು ಬದಲಾವಣೆಯನ್ನು ಪರಿಶೀಲಿಸಬೇಕು. ನೈಜ ಮತದಾರರ ಹೆಸರು ಕೈಬಿಡದಂತೆ ಹಾಗೂ ನಕಲಿ ಹೆಸರು ಸೇರ್ಪಡೆಯಾಗದಂತೆ ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು. ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿಯೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ವಕ್ತಾರೆ ಶೈಲಜಾ ಹಿರೇಮಠ, ತರಬೇತಿದಾರರಾದ ಗಿರೀಶಕುಮಾರ ಹಾಗೂ ಪ್ರವೀಣ್ ಕುಮಾರ್ ಅವರು ಬಿಎಲ್‌ಎ–2ಗಳು ಪಾಲಿಸಬೇಕಾದ ಕ್ರಮಗಳ ಕುರಿತು ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಸೋಮಶೇಖರ ವೈಜಾಪೂರು, ಶೇಖರಗೌಡ ಮಾಲಿಪಾಟೀಲ, ಹ್ಯಾರಿಸ್, ರಾಕೇಶ್ ಕುಮಾರ, ಮೈನುದ್ದೀನ್ ಮುಲ್ಲಾ, ಫಾರೂಕ್ ಡಾಲಾಯತ್, ಶಕುಂತಲಾ ಹಿರೇಮಠ, ಶಿವಶಂಕರಗೌಡ ಕಡೂರು, ದೊಡ್ಡಬಸವ ಬಯ್ಯಾಪುರ, ಲಾಡ್ಲೆಮಷಾಕ್ ದೋಟಿಹಾಳ, ಹನುಮೇಶ ಗುಮಗೇರಿ, ಕರಿಸಿದ್ದಪ್ಪ ಪಟ್ಟಣಶೆಟ್ಟಿ, ವೀರೇಶ್ ಕಮ್ಮಾರ, ವೆಂಕಟೇಶ ಚವ್ಹಾಣ ಸೇರಿದಂತೆ ಬ್ಲಾಕ್ ಸಮಿತಿ ಅಧ್ಯಕ್ಷರು, ಯೂತ್ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ನೂರಾರು ಬಿಎಲ್‌ಎ–2 ಏಜೆಂಟರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka